ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 47 ನವೆಂಬರ್ 28, 1982 ಬೆಲೆ 60 ಪೈಸೆ

ಡಿಸೆಂಬರ್ ೧೩ ರ ರೈತರ ಪ್ರದರ್ಶನ ಯಶಸ್ವಿಗೊಳಿಸಿ

ಡಿಸೆಂಬರ್ 13 ರಂದು ಬೆಂಗಳೂರಿನಲ್ಲಿ ರೈತರ ಬೃಹತ್ ಪ್ರದರ್ಶನ ನಡೆಸಿ ಹತ್ತು ಲಕ್ಷ ಸಹಿ ಸಂಗ್ರಹದ ಮನವಿಯನ್ನು ಮುಖ್ಯ ಮಂತ್ರಿಯವರಿಗೆ ಅರ್ಪಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಕರೆ ಕೊಟ್ಟಿದೆ. ಈ ಮಹ ಪ್ರದರ್ಶನ ವನ್ನು ಯಶಸ್ವಿಗೊಳಿಸಲು ಹಾಗೂ ರೈತ-ಕಾರ್ಮಿಕರ ಐಕ್ಯತೆ ಸಾಧಿಸಲು ಬೆಂಗಳೂರು ನಗರದ ಕಾರ್ಮಿಕ ವರ್ಗವೂ ಸಂಪೂರ್ಣ ಬೆಂಬಲ ನೀಡಲು ಮುಂದೆ ಬಂದಿರುವುದು ಸ್ವಾಗತಾರ್ಹ. ವಿದ್ಯಾರ್ಥಿ ಹಾಗೂ ಯುವಜನತೆಯೂ ರೈತರ ಮಹ ಪ್ರದರ್ಶನಕ್ಕೆ ಬೆಂಬಲ ನೀಡಿದ್ದಾರೆ.

ಕಬ್ಬು ಬೆಳೆಗಾರರ ಹೋರಾಟದ ಹಿನ್ನೆಲೆಯಲ್ಲಿ ಈ ಬೃಹತ್ ಮಹ ಪ್ರದರ್ಶನವನ್ನು ಯಶಸ್ವಿ ಗೊಳಿಸಲು, ಸರಕಾರದ ರೈತ ವಿರೋಧಿ ನೀತಿಯನ್ನು ಸೋಲಿಸಲು ಮುಂದಾಗಿರಿ.

ಸಂಪಾದಕೀಯ

ರೈತರ ರಕ್ತ ಕುಡಿಯುವ ಸರಕಾರಕ್ಕೆ ಧಿಕ್ಕಾರ

ಕಳೆದ ಮೂರು ವರ್ಷಗಳಿಂದಲೂ ಗುಂಡೂರಾವ್ ಸರಕಾರ ರೈತರ, ವಿದ್ಯಾರ್ಥಿಗಳ, ಕಾರ್ಮಿಕರ ರಕ್ತ ಕುಡಿಯುವುದರಲ್ಲೇ ನಿರತವಾಗಿದೆ. ರಾಜ್ಯದ ನಾನಾ ಭಾಗಗಳಲ್ಲಿ ನಡೆದ ಗೋಳೀಬಾರಿನಿಂದ ನೂರಕ್ಕೂ ಮೇಲ್ಪಟ್ಟು ಜನರು ಅಸು ನೀಗಿದ್ದಾರೆ, ರಕ್ತ ಕೋಡಿಯಾಗಿ ಹರಿದಿದೆ. ವಿಧವೆಯರ, ನಿರ್ಗತಿಕ ಮಕ್ಕಳ, ಕೈ-ಕಾಲು-ಕಣ್ಣು ಕಳೆದುಕೊಂಡ ಅಂಗಹೀನರ ಸಾಲು ಉದ್ದವಾಗುತ್ತ ನಡೆದಿದೆ.

ಇಂಥ ಅಮಾನುಷ, ಕ್ರೂರ ಕೊಲೆಗಳ ವಿರುದ್ಧ ವಿರೋಧ ಪಕ್ಷಗಳ ಸಂಘಟಿತ ಚಳವಳಿ ನಡೆಯುತ್ತಿದೆ. ವಿಧಾನ ಸಭೆಯ ಒಳಗೂ ಹೊರಗೂ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ.

ಅಭಿವೃದ್ಧಿ ಕರ, ನೀರಿನ ಕರಿಗೆ ರದ್ದಾಗಿದೆಯೆಂದು ಸರಕಾರ ಹೇಳಿತ್ತು. ಇತರ ಸೌಲಭ್ಯಗಳನ್ನೊದಗಿಸಿದ್ದೇವೆಂದೂ ಗುಂಡೂರಾವ್ ವಿಧಾನ ಸಭೆಯಲ್ಲಿ ಸಾರುತ್ತಿದ್ದಾರೆ. ಆದರೆ ಸರಕಾರದ ಆಶ್ವಾಸನೆಗಳು ವಿಧಾನ ಸೌಧ ಬಿಟ್ಟು ಹಳ್ಳಿ ತಲುಪಿರುವುದಿಲ್ಲೆಂದು ರೈತರ ತಕರಾರು.

ಆಶ್ವಾಸನೆಗಳ ತೂಗುಯ್ಯಾಲೆಯಲ್ಲಿ ಪವಡಿಸಿರುವ ಗುಂಡೂರಾಯರಿಗೆ ಕರ್ನಾಟಕದ ಜನತೆಯ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಸಾಧ್ಯವಾಗುತ್ತಿಲ್ಲ. ಸಮಸ್ಯೆಗಳಿಗೆ ಸಕಾಲದಲ್ಲಿ ಪರಿಹಾರ ಒದಗಿಸಬೇಕಾದ್ದು ಸರಕಾರದ ಕರ್ತವ್ಯವಾಗಿದೆ. ಗುಂಡೂರಾವ್ ಸರಕಾರ ಇದರಲ್ಲಿ ವಿಫಲಗೊಂಡಿದೆ.

ರೈತರ ಹಾಗೂ ಇತರ ಜನ ವಿಭಾಗಗಳ ಚಳವಳಿ ನಡೆಯುತ್ತಲೇ ಇದೆ. ಅದನ್ನು ದಮನ ಮಾಡಲು ಗೋಲಿಬಾರು ಮಾಡುತ್ತಲೇ ಇದ್ದಾರೆ. ಇಂಥ ಗೋಳೀಬಾರಿನ ನ್ಯಾಯಾಂಗ ವಿಚಾರಣೆಯಾಗಬೇಕೆಂದು, ರೈತರ-ಕಾರ್ಮಿಕರ ಅಗತ್ಯ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ವಿರೋಧ ಪಕ್ಷಗಳೆಲ್ಲ ಶಾಂತಿಯುತ ಧರಣಿ ನಡೆಸುತ್ತಿರುವಾಗಲೇ ಗೆಜ್ಜಲಗೇರಿಯಲ್ಲಿ ಮತ್ತೆ ಗೋಳಿಬಾರಾಗಿ, ಇಬ್ಬರು ರೈತರು ಗೋಳಿಗೆ ತುತ್ತಾಗಬೇಕಾದರೆ ಗುಂಡೂರಾವ್ ಸರಕಾರ ಅನುಭವದಿಂದ ಏನೂ ಕಲಿತಿಲ್ಲೆಂಬ ವಿಷಯ ಸ್ಪಷ್ಟವಾಗುತ್ತದೆ. ರಕ್ತ ನೋಡದೆ ಕೆಲವರಿಗೆ ನಿದ್ದೆ ಬರುವುದೇ ಇಲ್ಲ. ಇಂಥ ಪರಿಸ್ಥಿತಿ ನಮ್ಮ ಗುಂಡೂರಾವ್ ಸರಕಾರದ್ದಾಗಿದೆ.

ರಕ್ತ ಚೆಲ್ಲಿದರೂ, ಜನರನ್ನು ಕೊಂದರೂ ನಾನು ಗೆಲ್ಲುತ್ತೇನೆ ಎಂಬ ಅಹ್ವಾನವನ್ನು ಗುಂಡೂರಾಯರು ವಿಧಾನ ಸಭೆಯಲ್ಲಿ ವಿರೋಧ ಪಕ್ಷಗಳಿಗೂ, ರಾಜ್ಯದ ಜನತೆಗೂ ನೀಡಿದ್ದಾರೆ. ಈ ಅಹ್ವಾನವನ್ನು ಸ್ವೀಕರಿಸಿ ಸರಿಯಾದ ಉತ್ತರ ಕೊಡುವ ಜವಾಬ್ದಾರಿ ಜನರದ್ದಾಗಿದೆ; ವಿರೋಧ ಪಕ್ಷಗಳದ್ದಾಗಿದೆ, ಆದರಲ್ಲೂ ಹೆಚ್ಚಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಇತರ ಎಡ ಪಕ್ಷಗಳದ್ದಾಗಿದೆ.

ಐಕ್ಯ ಹೋರಾಟದಿಂದಲೇ ಪರಿಹಾರ ಸಾಧ್ಯ

"ಇಂದಿರಾ ಗಾಂಧಿ ಸರಕಾರದ ಬಂಡವಾಳಶಾಹಿ ಭೂಮಾಲಿಕ ಪರ ಧೋರಣೆಗಳ ಫಲವಾಗಿ ಹಲವಾರು ರೀತಿಯ ಸಮಸ್ಯೆಗಳಿಂದ ಬಳಲುತ್ತಿರುವ ಜನತೆಯು ಪ್ರಶ್ನೆಗಳನ್ನೆತ್ತಿ ಎಲ್ಲ ರೂಪದ ಹೋರಾಟಗಳನ್ನು ನಡೆಸಲು ಮುಂದಾದರೆ ಮಾತ್ರ ವಿರೋಧ ಪಕ್ಷಗಳ ಒಕ್ಕೂಟವು ಸಾಧ್ಯವಾಗುವುದು; ಜನರ ಪ್ರಶ್ನೆಗಳಿಗೆ ಇಂದಲ್ಲ ನಾಳೆ ಪರಿಹಾರ ಸಿಗುವುದೆಂಬ ಭರವಸೆವುಂಟಾಗುವುದು" ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡರಾದ ಕಾಂ| ಸೂರ್ಯನಾರಾಯಣರಾವ್ ಅವರು ಎಲ್ಲ ವಿರೋಧ ಪಕ್ಷಗಳ ಪರವಾಗಿ 21-11-82 ರಂದು ಶೇಷಾದ್ರಿಪುರದ ನೆಹರೂ ಮೈದಾನದಲ್ಲಿ ಸೇರಿದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಘೋಷಿಸಿದರು.

ರಾಜ್ಯದಲ್ಲಿ ಕೆ.ಜಿ.ಎಫ್., ಮಳವಳ್ಳಿ, ದೊಡ್ಡಹಳ್ಳಿ, ಬೆಂಗಳೂರು ನಗರಗಳಲ್ಲಿ ನಡೆದ ಗೋಳೀಬಾರ್ ಪ್ರಕರಣಗಳ ಬಗ್ಗೆ ನ್ಯಾಯಾಂಗ ತನಿಖೆ, ರೈತರಿಗೆ ಮತ್ತು ರೈತ ಕಾರ್ಮಿಕರಿಗೆ ಅಧಿಕೃತವಾಗಿ ಸರ್ಕಾರ ನೀಡಿದ ಎಲ್ಲಾ ಆಶ್ವಾಸನೆಗಳ ತಕ್ಷಣ ಈಡೇರಿಕೆ, ವಿವಿಧ ತನಿಖಾ ಆಯೋಗಗಳ ವರದಿಗಳ ಪ್ರಕಟಣೆ ಮತ್ತು ಅದರ ಮೇಲೆ ಕ್ರಮ, ಸರ್ಕಾರಿ ಉದ್ಯಮರಂಗ, ಕಾರ್ಮಿಕರ ಮುಷ್ಕರ, ರೈತ ಚಳುವಳಿ, ವಿದ್ಯಾರ್ಥಿ ಆಂದೋಲನ ಮತ್ತು ಭಾಷಾ ವಿವಾದಗಳಲ್ಲಿ ಬಂಧಿತರ ವಿರುದ್ಧ ಇರುವ ಮೊಕದ್ದಮೆಗಳನ್ನು ತಕ್ಷಣ ಹಿಂತೆಗೆದುಕೊಳ್ಳುವುದು ರಾಜ್ಯದ ಪೋಲೀಸ್ ಆಡಳಿತದ ಸುಧಾರಣೆ— ಈ ಬೇಡಿಕೆಗಳಿಗಾಗಿ ರಾಜ್ಯದ ಎಲ್ಲ ವಿರೋಧ ಪಕ್ಷಗಳು ದಿ. 12-11-82 ರಿಂದ ತಾ| 21ರ ವರೆಗೆ ವಿಧಾನ ಸೌಧದ ಮುಂದೆ ಉಪವಾಸ ಸತ್ಯಾಗ್ರಹ ಆಚರಿಸಿದ್ದು ಸಾರ್ವಜನಿಕ ಸಭೆಯಲ್ಲಿ ಕೊನೆಗೊಳಿಸಿದರು.

ಕಾಂ| ಸೂರಿಯವರು ಮುಂದುವರಿದು "ವಿರೋಧ ಪಕ್ಷಗಳ ಐಕ್ಯತೆ ಎಂದರೆ ಅವರೆಲ್ಲ ಒಂದೇ ಪಕ್ಷದಲ್ಲಿ ವಿಲೀನವಾಗುವುದೆಂದು ಅರ್ಥವಲ್ಲ. ಅಂಥಹ ವಿಲೀನಕ್ಕೆ ಭಾರತ ಕಮ್ಯುನಿಸ್ಟ್ ಪಾರ್ಟಿ (ಮಾರ್ಕ್ಸ್‌ವಾದಿ) ಒಪ್ಪುವುದಿಲ್ಲ. ಆದರೆ ನಿಜವಾಗಿ ಇಂದು ಬೇಕಾಗಿರುವುದು ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಒಂದಾಗಿ ಹೋರಾಡುವುದು ಅವುಗಳಿಗೆ ಈ ಭ್ರಷ್ಟ ಅಧ್ಯಕ್ಷ, ಸರ್ವಾಧಿಕಾರಿ ಸರಕಾರದಿಂದ ಪರಿಹಾರ ಕಂಡುಕೊಳ್ಳುವುದರಲ್ಲಿ ಏಕ ಮನೋಭಾವವಾಗಿದೆ ಎಂದು ವಿವರಿಸಿದರು.

ಸಿ ಪಿ ಐ. (ಎಂ) ರಾಜ್ಯ ಕಮಿಟಿ ಕಾರ್ಯದರ್ಶಿ ಕಾಂ| ರಾಮಚಂದ್ರ ರಾವ್ ಅವರು ಮಾತಾಡುತ್ತ ಗುಂಡೂರಾವ್ ಸರಕಾರ ಎಲ್ಲ ಪ್ರಜಾಪ್ರಭುತ್ವ ಮೌಲ್ಯಗಳನ್ನು ತುಚ್ಛೀಕರಿಸಿ, ಉದ್ಧಟತನದಿಂದ ಶ್ರೀಮಂತ ವರ್ಗಗಳ ಹಿತಗಳನ್ನು ರಕ್ಷಿಸುತ್ತಿದೆ. ಜನತೆ ತಮ್ಮ ಬೇಡಿಕೆಗಳಿಗಾಗಿ ಹೋರಾಡುತ್ತಿರುವಾಗ ಗುಂಡು ಹಾಕಿ ನೂರಾರು ಮಂದಿಯನ್ನು ಕೊಲೆ ಮಾಡುತ್ತಿದೆ. ಈ ಸರಕಾರ ರೈತ-ಕಾರ್ಮಿಕರ ವಿರೋಧಿಯಾಗಿರುವುದರಿಂದ ಇದನ್ನು ಸೋಲಿಸಬೇಕೆಂದು ಕರೆ ನೀಡಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಎಂ. ಎಸ್. ಕೃಷ್ಣನ್, ಬಿ ವಿ ಕಕ್ಕಿಲ್ಲಾಯ, ಜನತಾ ಪಕ್ಷದ ಜೊ ಮ್ಯಾಯಿ, ಕಾಂಗ್ರೆಸ್ (ಎಸ್) ನ ತುಳಸೀದಾಸಪ್ಪ ಮೊದಲಾದವರು ಭಾಷಣ ಮಾಡಿ ವಿರೋಧ ಪಕ್ಷದ ಐಕ್ಯತೆ ಮುಂದುವರಿಯಬೇಕೆಂದು ಆಶಿಸಿದರು. ಕ್ರಾಂತಿ ರಂಗದ ಶ್ರೀ ಬಂಗಾರಪ್ಪನವರು ಗುಂಡೂರಾವ್ ಸರಕಾರದ ಅನ್ಯಾಯಗಳನ್ನು ವಿವರಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜನತಾ ಪಕ್ಷದ ಹಿರಿಯ ಮುಖಂಡರಾದ ಶ್ರೀ ಶಾಮಣ್ಣನವರು "ಇನ್ನಾದರೂ ತಂತಮ್ಮೊಳಗಿನ ಕಚ್ಚಾಟವನ್ನು ಬದಿಗಿಟ್ಟು, ಇಂದಿರಾ ಗಾಂಧಿ ಸರಕಾರದ ಭ್ರಷ್ಟ ಮತ್ತು ಸರ್ವಾಧಿಕಾರಿ ಆಡಳಿತೆಯನ್ನು ಕೊನೆಗೊಳಿಸಲು ಮುಂದಾಗಿರಿ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ವಿರುದ್ಧ ಒಬ್ಬನೇ ವ್ಯಕ್ತಿ ಸ್ಪರ್ಧಿಸುವಂತೆ ಮಾಡಿರಿ, ಪಕ್ಷಾಂತರಿಗಳನ್ನು ದೂರೀಕರಿಸಿರಿ ಎಂದು ಹೇಳಿದರು.

ಜನತಾ ಪಾರ್ಟಿಯ ಮುಖಂಡ ಶ್ರೀ ಲಕ್ಷ್ಮೀಸಾಗರ್ ಅವರು ಸ್ವಾಗತಿಸಿದರು. ಸಭೆ ನಡೆಯುತ್ತಿದ್ದಂತೆ ಇಂದಿರಾ ಕಾಂಗ್ರೆಸ್ಸಿನ ಕೆಲವು ಕಿಡಿಗೇಡಿಗಳು ಗೊಂದಲವೆಬ್ಬಿಸಲು ಪ್ರಯತ್ನಿಸಿ ವಿಫಲರಾದರು.

ರಾಜ್ಯದ ವಿರೋಧ ಪಕ್ಷಗಳ ಸಂಯುಕ್ತ ಕ್ರಿಯಾ ಸಮಿತಿಯ ಕರೆಯ ಮೇರೆಗೆ, ಸಿ.ಪಿ.ಐ.(ಎಂ) ಒಳಗೊಂಡು ಎಲ್ಲ ವಿರೋಧ ಪಕ್ಷಗಳು ತಾ|| 18-11-82 ರಂದು ತುಮಕೂರಿನಲ್ಲಿ ತಹಶೀಲದಾರ್ ಕಚೇರಿಯ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಶಿರಾ, ಕುಣಿಗಲ್, ಗುಬ್ಬಿ ಮತ್ತಿನ್ನಿತರ ಭಾಗಗಳ ಮಹಿಳೆಯರನ್ನೊಳಗೊಂಡ ನೂರಾರು ರೈತ-ಕಾರ್ಮಿಕರೂ ಈ ಧರಣಿಯಲ್ಲಿ ಪಾಲ್ಗೊಂಡಿದ್ದರು. ಸಿ. ಪಿ. ಐ. (ಎಂ)ನ ಮುಖಂಡರಾದ ಕಾಂ| ಬಡೇಸಾಬ್, ಎಚ್.ಸಿ.ಚೆನ್ನಪ್ಪ, ಕೆ. ಆರ್. ನಾಯರ್, ದಸ್ತಗೀರ್ ಮೊದಲಾದವರು ಧರಣಿಯಲ್ಲಿ ಭಾಗವಹಿಸಿದ್ದರು. ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಕಾಂ| ಎಚ್. ಸಿ. ಚೆನ್ನಪ್ಪ, ಮಹಮ್ಮದ್ ದಸ್ತಗೀರ್, ಬಿ.ಜೆ.ಪಿ.ಯ ಶ್ರೀ ಬೋರಪ್ಪ, ಶ್ರೀ ನಂಜುಂಡಪ್ಪ, ಕಾಂ| ರಾಮಕೃಷ್ಣಯ್ಯ. ಕ್ರಾಂತಿರಂಗದ ಶ್ರೀ ಭಾಸ್ಕರಪ್ಪ, ಶ್ರೀ ನಜೀರ್ ಬೇಗ್ ಮೊದಲಾದವರು ಭಾಷಣ ಮಾಡಿದರು.

(8ನೇ ಪುಟ ನೋಡಿ)

ವಿಶ್ವ ಕಮ್ಯೂನಿಸ್ಟ್ ಚಳವಳಿಯ ಐಕ್ಯತೆಯೇ ನಮ್ಮ ಗುರಿ—ಆಂದ್ರೊಪೋವ್

"ಸಮತಾವಾದಿ ದೇಶಗಳಲ್ಲಿಯು, ವಿಶ್ವ ಕಮ್ಯೂನಿಸ್ಟ್ ಚಳವಳಿಯ ಐಕ್ಯತೆಯ ಗುರಿ ಸಾಧನೆಗಾಗಿ, ಸರ್ವ ಸಾಧಾರಣ ಗುರಿಗಾಗಿ ನಡೆಯುವ ಹೋರಾಟದಲ್ಲಿ ಒಮ್ಮತವನ್ನು ಹೆಚ್ಚಿಸಲಿಕ್ಕೆ ನಾನು ಶ್ರಮಿಸುತ್ತೇನೆ" ಎಂದು ಪ್ರತಿಜ್ಞೆ ಮಾಡಿದವರು ರಷ್ಯದ ಕಮ್ಯೂನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಂಡ ಕಾಮ್ರೇಡ್ ಯೂರಿ ಆಂದ್ರೋಪೋವ್. ಸಂದರ್ಭ — ಕಾಂ| ಬ್ರೆಜ್ನೇವ್ ಅವರ ಅಂತ್ಯವಿಧಿಯ ಕಾಲದಲ್ಲಿ.

ಜಗತ್ತಿನಲ್ಲಿ ಶಾಂತಿ ಹಾಗೂ ಅಂತರರಾಷ್ಟ್ರೀಯ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಸುಗಮಗೊಳಿಸಲು ನಡೆಯುತ್ತಿರುವ ಹೋರಾಟಕ್ಕೆ ತಮ್ಮ ಪಕ್ಷ ಹಾಗೂ ಸರಕಾರದ ಬೆಂಬಲವನ್ನು ಮುಂದುವರೆಸುವುದಾಗಿ ಅವರು ಸಾರಿದರು.

ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ, ಸಾಮಾಜಿಕ ಬದಲಾವಣೆಗಾಗಿ ಹೋರಾಡುತ್ತಿರುವ ಜನತೆಯೊಡನೆ ಸಹಭಾಗಿಗಳಾಗುವದಲ್ಲದೇ, ಅವರಿಗೆ ಸಂಪೂರ್ಣ ಸಹಕಾರ ನೀಡುವದಾಗಿಯೂ ಅವರು ತಿಳಿಸಿದರು. ಇದೇ ಸಮಯದಲ್ಲಿ ಸಾಮ್ರಾಜ್ಯಶಾಹಿ ಆಕ್ರಮಣಕಾರರಿಗೆ ಎಚ್ಚರಿಕೆಯನ್ನೂ ಅವರು ನೀಡಿದರು.

ಜನತಾ ಚೀನದೊಡನೆ ಕಳೆದ 21 ವರ್ಷಗಳಿಂದಲೂ ಕೆಟ್ಟು ಹೋಗಿದ್ದ ಸಂಬಂಧವನ್ನು ತಿಳಿಗೊಳಿಸಲು ಯತ್ನಿಸುವುದಾಗಿಯೂ ಅವರು ಸಾರಿದರು.

ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯ ಐಕ್ಯತೆಯ ದೃಷ್ಟಿಯಿಂದ ಕಾಂ| ಆಂದ್ರೋಪೋವ್ ಅವರ ಈ ಹೇಳಿಕೆ ಅತೀ ಮಹತ್ವ ಪಡೆದಿದೆ. ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟವನ್ನು ಇನ್ನೂ ತೀವ್ರಗೊಳಿಸಿ ಸ್ವಾತಂತ್ರ್ಯಕ್ಕಾಗಿ, ತಮ್ಮ ದೇಶದ ಸಾರ್ವಭೌಮತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿರುವ ವಿಶ್ವದ ನಾನಾ ಭಾಗಗಳ ಜನತೆ ಕಾಮ್ರೇಡ್ ಆಂದ್ರೋಪೋವ್ ಅವರ ಹೇಳಿಕೆಯನ್ನು ಹಾರ್ದಿಕವಾಗಿ ಸ್ವಾಗತಿಸುವುದರಲ್ಲಿ ಸಂಶಯವಿಲ್ಲ.

ಸೋವಿಯತ್ ರಷ್ಯಾ ಮತ್ತು ಜನತಾ ಚೀನಾ ತಮ್ಮ ಭಿನ್ನಾಭಿಪ್ರಾಯಗಳನ್ನು ಸೌಹಾರ್ದ ರೀತಿಯಿಂದ ಬಗೆಹರಿಸಿಕೊಳ್ಳಬೇಕೆಂಬುದು ಸಿ. ಪಿ. ಐ. (ಎಂ) ನ ಆಶಯ. ಇದರಿಂದ ಜಾಗತಿಕ ಸಮಾಜವಾದಕ್ಕೆ, ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಹಾಗೂ ಜಾಗತಿಕ ಸ್ಥಿತಿಯಲ್ಲಿ ಎಡ ಪಂಥೀಯ ಬದಲಾವಣೆಯನ್ನುಂಟುಮಾಡುವಲ್ಲಿ ಮಹತ್ವದ ಪರಿಣಾಮ ಬೀರುತ್ತದೆಂದು ಸಿ. ಪಿ. ಐ. (ಎಂ)ನ ಜಲಂಧರ್ ಮತ್ತು ವಿಜಯವಾಡಾ ಅಧಿವೇಶನದಲ್ಲಿ ಒತ್ತಿ ಹೇಳಲಾಗಿತ್ತು.

○

ಗ್ವಾಲಿಯರ್ ರೆಯಾನ್ ಕೆಲಸಗಾರರ ಸಮಾವೇಶ

ದೇಶದಲ್ಲಿಯ ಅತಿ ದೊಡ್ಡ ಗುತ್ತೇದಾರಿ ಬಂಡವಾಳಶಾಹಿಯಾದ ಬಿರ್ಲಾನ ಅಧೀನದಲ್ಲಿರುವ ಗ್ವಾಲಿಯರ್ ರೆಯಾನ್ ಹೆಸರಲ್ಲಿ ನಡೆಸಲ್ಪಡುತ್ತಿರುವ ಕಾರ್ಖಾನೆಗಳ ಕೆಲಸಗಾರರ ಅಖಿಲ ಭಾರತ ಮಟ್ಟದ ಸಮ್ಮೇಳನ ತಾ|| 21-11-82 ರಂದು ಹರಿಹರದಲ್ಲಿ ಸೇರಿತ್ತು. ಅಕ್ಟೋಬರ್ 17ನೇ ತಾರೀಖಿನಿಂದಲೇ ತಮ್ಮ ಬೇಡಿಕೆಗಳ ಸಲುವಾಗಿ ಹರಿಹರ ಪಾಲಿಫೈಬರ್ ಕಾರ್ಖಾನೆಯ ಕೆಲಸಗಾರರು ನಡೆಸುತ್ತಿರುವ ಐಕ್ಯ ಹೋರಾಟದ ಹಿನ್ನೆಲೆಯಲ್ಲಿ ಈ ಸಮ್ಮೇಳನಕ್ಕೆ ಹೆಚ್ಚು ಮಹತ್ವ ಬಂದಿದೆ.

ಸಿ. ಐ. ಟಿ. ಯು ಮುಖಂಡರಾದ ಕಾಂ| ವಿ. ಜೆ. ಕೆ. ನಾಯರ್ ಅವರ ಅಧ್ಯಕ್ಷತೆಯಲ್ಲಿ ಎ.ಐ.ಟಿ.ಯು.ಸಿ. ಮುಖಂಡರಾದ ಕಾಂ| ಪಂಪಾಪತಿಯವರ ಉದ್ಘಾಟನೆಯಿಂದ ಈ ಸಮ್ಮೇಳನ ಪ್ರಾರಂಭವಾಯಿತು. ಸಮ್ಮೇಳನದ ಕೊನೆಯಲ್ಲಿ ಹತ್ತು ಸಾವಿರಕ್ಕೂ ಮೇಲ್ಪಟ್ಟು ನೆರೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಕಾಂ| ಮಹಮ್ಮದ್ ಬಶೀರ್ (ಎಸ್. ಟಿ. ಯು.) ಕರೀಂ (ಸಿ.ಐ.ಟಿ.ಯು.) ಪಂಕಜಾಕ್ಷನ್ (ಎ.ಐ.ಟಿ.ಯು.ಸಿ.) ವಿ. ಚಂದ್ರನ್ (ಐ.ಎನ್.ಟಿ.ಯು.ಸಿ.) ಮೊದಲಾದವರು ಭಾಷಣಮಾಡಿ ಗುತ್ತೇದಾರಿ ಬಂಡವಾಳದಾರರ ವಿರುದ್ಧ ಐಕ್ಯ ಹೋರಾಟಕ್ಕೆ ಕರೆ ಕೊಟ್ಟರು.

ಇದೇ ವರ್ಷ ಡಿಸೆಂಬರ್ ಒಂದರಂದು ದೇಶದಲ್ಲಿರುವ ರೆಯಾನ್ ಕಾರ್ಖಾನೆಗಳ ಕೆಲಸಗಾರರು ಐಕ್ಯತೆಯ ದಿನ ಆಚರಿಸಬೇಕೆಂದೂ, ವಿದೇಶಗಳಿಂದ ರೆಯಾನ್ ಆಮದು ಮಾಡುವ ಸರಕಾರದ ನೀತಿಯನ್ನು ಖಂಡಿಸಬೇಕೆಂದೂ, ಹರಿಹರ ಪಾಲಿಫೈಬರ್ ಕೆಲಸಗಾರರ ಹೋರಾಟಕ್ಕೆ ಬೆಂಬಲ ನೀಡಬೇಕೆಂದೂ, ಕೇರಳದ ಮಾವೂರ ಕಾರ್ಖಾನೆಯಲ್ಲಿ ಕೆಲಸಗಾರರನ್ನು ಕಡಿಮೆ ಮಾಡುತ್ತಿರುವುದನ್ನು ವಿರೋಧಿಸಬೇಕೆಂದೂ, ಬೋನಸ್ಸಿಗಾಗಿ ಹೋರಾಡಬೇಕೆಂದೂ ಸಮ್ಮೇಳನ ನಿರ್ಣಯಿಸಿತು. ಅಖಿಲ ಭಾರತ ಮಟ್ಟದ ಸಂಘಟನೆಗಾಗಿ ಕಾಂ| ವಿ. ಜೆ. ಕೆ. ನಾಯರ್ ಸಂಚಾಲಕರಾಗಿರುವ ಸಮನ್ವಯ ಸಮಿತಿ ರಚಿಸಲಾಯಿತು.

ಕಾಂ| ಇ. ಎಂ. ಎಸ್. ನಂಬೂದಿರಿಪಾದ್ ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ, ಬಿ. ಟಿ. ರಣದಿವೆ, ಅಧ್ಯಕ್ಷ ಸಿ.ಐ.ಟಿ.ಯು., ಇಂದ್ರಜಿತ್ ಗುಪ್ತಾ ಪ್ರಧಾನ ಕಾರ್ಯದರ್ಶಿ ಎ.ಐ.ಟಿ.ಯು.ಸಿ., ಚಾತುನ್ನಿ ಮಾಸ್ಟರ್ ಅಖಿಲ ಭಾರತ ಕಿಸಾನ್ ಸಭಾ, ಬಿ. ಎಂ. ಎಸ್. ಮೊದಲಾದವರಿಂದ ಶುಭ ಸಂದೇಶಗಳು ಬಂದಿದ್ದವು.

ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

ದಾಂಡೇಲಿ :

ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ಬಹಿರಂಗ ಸಭೆ

1981ರಲ್ಲಿ ಅತೀವ ದಬ್ಬಾಳಿಕೆಯಿಂದ ದಾಂಡೇಲಿಯ ಪ್ಲಾಯ್‌ವುಡ್ ಕಾರ್ಮಿಕರ ಹೋರಾಟವನ್ನು ಹತ್ತಿಕ್ಕಲಾಗಿತ್ತು. ಇದೀಗ ಈ ಕಾರ್ಮಿಕರು ಮತ್ತೆ ಸಿ.ಐ.ಟಿ.ಯು ನೇತೃತ್ವದಲ್ಲಿ ಸಂಘಟಿತರಾಗಿ ಸಂಘಟನೆಯನ್ನು ಬಲಪಡಿಸಿಕೊಂಡಿದ್ದಾರೆ

27-9-82 ರಂದು ಆಡಳಿತ ವರ್ಗಕ್ಕೆ 1981-82ನೇ ಸಾಲಿನ ಬೋನಸ್ ಬಗ್ಗೆ ಬೇಡಿಕೆ ಪತ್ರವನ್ನು ಸಲ್ಲಿಸಲಾಗಿತ್ತು. ಆದರೆ ಆಡಳಿತ ವರ್ಗವು ಕಾರ್ಮಿಕ ವಿರೋಧಿ ನೀತಿಯನ್ನು ಮುಂದುವರೆಸಿಕೊಂಡು ಬಂದಿದ್ದೇ ಅಲ್ಲದೆ, 95%ರಷ್ಟು ಕಾರ್ಮಿಕರ ಬೆಂಬಲವಿದ್ದಾಗ್ಯೂ ಸಂಘಕ್ಕೆ ಮಾನ್ಯತೆನೀಡಿಲ್ಲ. ಈ ಕುರಿತು ಕಾರ್ಮಿಕ ಸಂಘವು ಎ. ಎಲ್. ಸಿ ಹತ್ತಿರ ಔದ್ಯಮಿಕ ತಂಟೆಯನ್ನು ದಾಖಲು ಮಾಡಿತು. ಇದಾವುದನ್ನು ಗಣನೆಗೇ ತೆಗೆದುಕೊಳ್ಳದ ಆಡಳಿತ ವರ್ಗವು ನವೆಂಬರ್ 13 ರಂದು ಬೋನಸ್ ಕೊಡುವು (ತನ್ನಿಚ್ಛೆಯಂತೆ)ದನ್ನು ಸಾರಿತು. ಕಾರ್ಮಿಕರು ಪ್ರತಿಭಟನೆಯೊಂದಿಗೆ ಬೋನಸ್ ಸ್ವೀಕಾರ ಮಾಡಲು ನಿರ್ಧರಿಸಿದರು.

15-11-82 ರಂದು ಸಂಘದ ಕಚೇರಿಯ ಆವರಣದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಎಂ. ಬಿ. ಕಟ್ಟಿ ಹಾಗೂ ಹರೀಶ ನಾಯ್ಕ ಇವರು ಮಾಜನಾಡಿ ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ಬಲವಾಗಿ ಖಂಡಿಸಿದರು. ಹಾಗೂ ಎದೆಗುಂದದೆ ಸಂಘಟನೆಯನ್ನು ಬಲಪಡಿಸಲು ಕರೆ ನೀಡಿದರು.

ನವೆಂಬರ್ 14 ರಂದು ಧಾರವಾಡದ ಪ್ಲೈವುಡ್ ಕಾರ್ಖಾನೆಯ ಕಾರ್ಮಿಕರು ಸಭೆ ಸೇರಿ ದಾಂಡೇಲಿಯ ಕಾರ್ಮಿಕ ಬಾಂಧವರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು.

○

ರಾಣಿಬೆನ್ನೂರು :

ಖಾದೀ ಗ್ರಾಮದ್ಯೋಗದಲ್ಲಿ ವಂಚನೆ ನಿರ್ವಹಣಾಧಿಕಾರಿ ಫರಾರಿ

ಧಾರವಾಡ ಜಿಲ್ಲಾ ಖಾದೀ ಗ್ರಾಮದ್ಯೋಗ ಸಂಘದ ರಾಣಿಬೆನ್ನೂರು ಘಟಕದ ಆಡಳಿತ ವರ್ಗದವರು ತೂಕದಲ್ಲಿ ವಂಚನೆ ಮಾಡುತ್ತಾ, ನೂರಾರು ಜನ ನೇಕಾರರಿಗೆ ಮೋಸವೆಸಗುತ್ತಿದ್ದುದು ಬಯಲಿಗೆ ಬಂದಿದೆ.

ಆಡಳಿತ ವರ್ಗದ ಈ ಮಹಾನುಭಾವರು ಮೂರು ವರ್ಷಕ್ಕಿನ ಹೆಚ್ಚು ಅವಧಿಯಿಂದ ಕೇಂದ್ರದ 150 ನೇಕಾರರಿಗೆ ಕಾಡುಕಲ್ಲಿನಿಂದ ತೂಕಮಾಡಿ ಲೆಕ್ಕದಲ್ಲಿ 22.45 ಕೆ. ಜಿ. ಯಂತೆ ಹಂಚುತ್ತಾ ಬಂದಿದ್ದರು. ನೂಲನ್ನು ಕೊಡುತ್ತಾ ಬಂದಿದ್ದರು. ಇದರಿಂದಾಗಿ ಪ್ರತಿಯೊಬ್ಬ ನೇಕಾರನೂ ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ನಷ್ಟವನ್ನು ಅನುಭವಿಸಿದ್ದರು.

ಈ ಅವ್ಯವಹಾರ ಕುರಿತು ಸಂಶಯಬಂದ ನೇಕಾರ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಎಸ್. ಎಚ್. ಕ್ಯಾದಗಿಯವರು ಕಾರ್ಮಿಕ ಬಾಂಧವರೊಡಗೂಡಿ 2-11-82ರಂದು ತಹಶೀಲ್ದಾರರಿಗೆ, ತೂಕ ಮಾಡುವ ಅಧಿಕಾರಿಗಳಿಗೆ ಹಾಗೂ ಸಬ್ ಇನ್ಸ್‌ಪೆಕ್ಟರರಿಗೆ ದೂರು ಸಲ್ಲಿಸಿದರು. ಈ ಅಧಿಕಾರಿಗಳು ಕೇಂದ್ರಕ್ಕೆ ಆಗಮಿಸಿ ಕಲ್ಲನ್ನು ಕೊಂಡೊಯ್ದು ಪರೀಕ್ಷಿಸಿದಾಗ ಆ ಕಲ್ಲಿನ ತೂಕ 21.5 ಕೆ. ಜಿ. ಇದ್ದುದ ಕಂಡು ಬಂತು. ಈ ವಂಚನೆ ಕೇಸನ್ನು ಕೋರ್ಟಿಗೆ ದಾಖಲು ಮಾಡಲಾಗಿದೆ. ಮುಖ್ಯ ನಿರ್ವಹಣಾಧಿಕಾರಿ ಎಂ. ಎಂ. ಶೆಟ್ಟರ ಎಂಬವನು ಫರಾರಿಯಾಗಿದ್ದಾನೆ.

ಈ ಅವ್ಯವಹಾರದಿಂದಾಗಿ ನೇಕಾರರಿಗೆ ಒಟ್ಟು ಒಂದೂವರೆ ಲಕ್ಷ ರೂ.ಗಳಿಗಿಂತ ಹೆಚ್ಚು ನಷ್ಟವಾಗಿದೆ. ಗಾಂಧೀಜಿಯ ಹೆಸರಿನ ಮೇಲೆ ನಡೆಯುತ್ತಿದ್ದ ಭಾರೀ ಮೋಸವನ್ನು ಬಯಲಿಗೆಳೆದ ರಾಣಿಬೆನ್ನೂರು ತಾಲ್ಲೂಕು ನೇಕಾರ ಕಾರ್ಮಿಕರ ಸಂಘದ ಕಾರ್ಯಕರ್ತರು ಅಭಿನಂದನಾರ್ಹರು.

○

ಗೆಜ್ಜಲಗೆರೆ ಪೋಲೀಸ್ ಗೋಲೀಬಾರಿನ ಖಂಡನೆ

ಮದ್ದೂರು ಸಮೀಪದ ಗೆಜ್ಜಲಗೆರೆಯಲ್ಲಿ ರೈತರು ತಾವು ಬೆಳೆದ ಕಬ್ಬಿಗೆ ಹೆಚ್ಚಿನ ಬೆಲೆ ಸಿಗಬೇಕೆಂದು ಮುಷ್ಕರ ನಡೆಸುತ್ತಿದ್ದಾಗ ಪೋಲೀಸರು ಅವರ ಮೇಲೆ ಗೋಲಿಬಾರ್ ಮಾಡಿ ಇಬ್ಬರನ್ನು ಕೊಂದಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಸೆಕ್ರೆಟಾರಿಯೇಟ್ ಬಲವಾಗಿ ಖಂಡಿಸುತ್ತದೆ.

ಪೋಲೀಸ್ ಗೋಲೀಬಾರಿನ ವಿರುದ್ಧ ರಾಜ್ಯದ ವಿರೋಧ ಪಕ್ಷಗಳೆಲ್ಲ ನ್ಯಾಯಾಂಗ ವಿಚಾರಣೆ ನಡೆಯಬೇಕೆಂದು ಸಂಯುಕ್ತ ಹೋರಾಟ ನಡೆಸುತ್ತಿರುವಾಗಲೇ ಮತ್ತೆ ಈ ರೀತಿ ಗೋಲೀಬಾರ್‌ಮಾಡಿ ರೈತರನ್ನು ಕೊಲ್ಲುತ್ತಿರುವುದು ಅತ್ಯಂತ ಹೇಯಕೃತ್ಯ. ಗುಂಡೂರಾವ್ ಸರಕಾರದ ಈ ಕ್ರೂರ ನೀತಿಯ ವಿರುದ್ಧ ರಾಜ್ಯದ ಜನತೆ ಮತ್ತು ವಿರೋಧ ಪಕ್ಷಗಳು ಪ್ರತಿಭಟನೆ ವ್ಯಕ್ತಮಾಡಬೇಕೆಂದೂ ಸೆಕ್ರೆಟಾರಿಯೇಟ್ ವಿನಂತಿಸಿದೆ.

—

ಸ್ಟೈಫಂಡರಿ ಪದವೀಧರರ ಹೋರಾಟಕ್ಕೆ ಬೆಂಬಲ

ಕರ್ನಾಟಕ ರಾಜ್ಯದ ಸ್ಟೈಫಂಡರಿ ಪದವೀಧರರು ತಮ್ಮ ನೌಕರಿಯನ್ನು ಕಾಯಂಗೊಳಿಸಬೇಕೆಂದೂ, ಮಾಸಿಕ ವೇತನ ರೂ. 500 ಸಿಗಬೇಕೆಂದೂ ಕೇಳಿ, ವಿಧಾನ ಸೌಧದ ಮುಂದೆ ತಾ|| 28-11-82 ರಿಂದ ಧರಣಿ ಸತ್ಯಾಗ್ರಹ ಪ್ರಾರಂಭ ಮಾಡಿರುವುದು ಅತಿ ಯೋಗ್ಯವಾಗಿದ್ದು ಈ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಸಂಪೂರ್ಣ ಬೆಂಬಲ ನೀಡುತ್ತದೆ.

ಸ್ಟೈಫಂಡರಿ ಪದವೀಧರರನ್ನು ಕಾಯಂಗೊಳಿಸುತ್ತೇವೆಂದು ಹೇಳುತ್ತ ಬಂದ ಗುಂಡೂರಾವ್ ಸರಕಾರ ತನ್ನ ಆಶ್ವಾಸನೆಯನ್ನು ಪೂರೈಸದಿದ್ದಾಗ, ಹೋರಾಟ ಪ್ರಾರಂಭಿಸಿರುವ ಸ್ಟೈಫಂಡರಿ ಪದವೀಧರರನ್ನು ನೌಕರಿಯಿಂದ ಕಿತ್ತು ಹಾಕುತ್ತೇವೆಂದು ಬೆದರಿಸುತ್ತಿರುವುದನ್ನೂ ಪಾರ್ಟಿ ಖಂಡಿಸುತ್ತದೆ.

ಆರ್ಥಿಕ ಸಮೀಕ್ಷೆ :

ಚೀನಾದ ಅದ್ಭುತ ಪ್ರಗತಿ

—ಆರ್. ಚಂದ್ರ

ಚೀನಾದ ಕ್ರಾಂತಿಯ ಮಹತ್ವ :

ಜನತಾ ಚೀನವು 1-10-82 ರಂದು ತನ್ನ 33ನೇ ವಾರ್ಷಿಕ ಗಣರಾಜ್ಯೋತ್ಸವವನ್ನು ಆಚರಿಸಿತು. ಜಾಗತಿಕ ಇತಿಹಾಸದಲ್ಲಿ ಒಂದನೇ ಮಹಾಯುದ್ಧದಲ್ಲಿ ಫ್ಯಾಸಿಸಂ ಮತ್ತು ನಾಸಿಸಂಗಳ ಸೋಲು ಹಾಗೂ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಶಕ್ತಿಗಳ ಗೆಲುವಿನಿಂದಾಗಿ ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಸಮಾಜವಾದದ ಉದಯ ಇವುಗಳು ಅತಿ ಮಹತ್ವದ ಘಟನೆಗಳು. 1949ರ ಚೀನಾದ ಅಕ್ಟೋಬರ್ ಮಹಾಕ್ರಾಂತಿಯಾಗಿ ಈ ಮೊದಲು ತಿಳಿಸಿದ ಘಟನೆಗಳಷ್ಟೇ ಜಾಗತಿಕ ಇತಿಹಾಸದಲ್ಲಿ ಮಹತ್ವವಾದುದು. ಅತ್ಯಂತ ಸ್ಫೂರ್ತಿದಾಯಕವಾದುದು. ಇದೇ ಸಂದರ್ಭ ಭಾರತವೂ ಸೇರಿದಂತೆ ಅನೇಕ ಏಷ್ಯಾ ಹಾಗೂ ಅಫ್ರಿಕಾ ದೇಶಗಳು ಒಂದೊಂದಾಗಿ ಸಾಮ್ರಾಜ್ಯಶಾಹಿಗಳಿಂದ ಸ್ವತಂತ್ರವಾಗುತ್ತಾ ಬಂದವು. ಉತ್ತರ ಕೊರಿಯಾ, ಕ್ಯೂಬಾ, ವಿಯಟ್ನಾಂ, ಕಂಪೂಚಿಯಾ, ಲಾವೋಸ್ ದೇಶಗಳಲ್ಲಿ ಸಾಮ್ರಾಜ್ಯಶಾಹಿಗಳ ಆಕ್ರಮಣಗಳ ವಿರುದ್ಧ ದೀರ್ಘಕಾಲದ ವಿರೋಚಿತ ಹೋರಾಟಗಳು ನಡೆದು ಸಮಾಜವಾದಿ ಸಮಾಜ ಸ್ಥಾಪಿಸಲು ಸಾಧ್ಯವಾಯಿತು. ಜಗತ್ತಿನಾದ್ಯಂತ ಸ್ವಾತಂತ್ರ್ಯ ಹಾಗೂ ಸಮಾಜವಾದಗಳಿಗಾಗಿ ಹೋರಾಟಗಳು ಹರಿತವಾಗುತ್ತಿದ್ದಂತೆ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳು ದುರ್ಬಲವಾಗುತ್ತಿವೆ ಮತ್ತು ವಿಶ್ವಶಾಂತಿ ಹಾಗೂ ಸಮಾಜವಾದಿ ಶಕ್ತಿಗಳು ಪ್ರಬಲವಾಗುತ್ತಿವೆ. ಈ ದಿಸೆಯಲ್ಲಿ ಕ್ರಾಂತಿಯ ನಂತರ ಚೀನಾ ಇತರ ಸಮಾಜವಾದಿ ರಾಷ್ಟ್ರಗಳಂತೆ ಕಳೆದ 33 ವರ್ಷಗಳಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ, ಮಿಲಿಟರಿಯಾಗಿ ಅದ್ಭುತ ಪ್ರಗತಿ ಸಾಧಿಸಿರುವುದನ್ನು ಸ್ಮರಿಸಬೇಕಾಗಿದೆ.

ಚೀನಾ ದೇಶವು ಕ್ರಾಂತಿಯಾಗುವಾಗ ಪ್ರಪಂಚದ ಅತ್ಯಂತ ಬಡ ಹಾಗೂ ಹಿಂದುಳಿದ ರಾಷ್ಟ್ರವಾಗಿತ್ತು. 1947ರಲ್ಲಿ ಭಾರತ ಸ್ವಾತಂತ್ರ್ಯಗೊಂಡಾಗ ಒಂದೂವರೆ ಶತಮಾನಗಳ ವಿದೇಶಿ ಆಳ್ವಿಕೆಯಿಂದಾಗಿ ಇಲ್ಲಿನ ವಾರ್ಷಿಕ ಸರಾಸರಿ ವರಮಾನವು ಅತ್ಯಂತ ಕಡಿಮೆಯಾಗಿತ್ತು. ಆದರೆ, 1949ರಲ್ಲಿ ಸ್ವಾತಂತ್ರ್ಯಗೊಂಡಾಗ ಚೀನಾದ ವಾರ್ಷಿಕ ವರಮಾನವು ಭಾರತಕ್ಕಿಂತಲೂ ಕಡಿಮೆಯಾಗಿತ್ತು ! ಹಾಗೆಯೇ, ಪ್ರಾರಂಭದಲ್ಲಿ ಚೀನಾದ ಸರಾಸರಿ ಆಹಾರ ಧಾನ್ಯಗಳ ಮತ್ತು ಕೈಗಾರಿಕೆಗಳ ಉತ್ಪಾದನೆಗಳೂ ಭಾರತದ ಸರಾಸರಿಗಿಂತ ತೀರಾ ಕಡಿಮೆಯಾಗಿತ್ತು. ಚೀನಾದ ಜನರ ಸರಾಸರಿ ವ್ಯವಸಾಯಯೋಗ್ಯವಾದ ಭೂಮಿಯು ಭಾರತದ ಜನರ ಸರಾಸರಿ ವ್ಯವಸಾಯ ಯೋಗ್ಯವಾದ ಭೂಮಿಗಿಂತ ಕಡಿಮೆಯಾಗಿತ್ತು. ಚೀನಾದ ನೈಸರ್ಗಿಕ ಪರಿಸ್ಥಿತಿಯಿಂದಾಗಿ ಅಲ್ಲಿಯ ವ್ಯವಸಾಯಯೋಗ್ಯ ಭೂಮಿಯನ್ನು ವಿಸ್ತರಿಸಲು ಅವಕಾಶ ಬಹಳ ಕಡಿಮೆ. ಭಾರತವೂ ಸೇರಿದಂತೆ ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗಿಂತ ತೀರಾ ಬಡ ರಾಷ್ಟ್ರವಾಗಿರುವುದೇ ಅಲ್ಲದೆ, ಬಡತನ, ನಿರಕ್ಷರತೆ, ನಿರುದ್ಯೋಗಗಳನ್ನು ಹೋಗಲಾಡಿಸುವ ಹೊಣೆಗಾರಿಕೆಯೂ ಇತರ ದೇಶಗಳಿಗಿಂತ ಬಹಳ ಕಷ್ಟವಾಗಿತ್ತು.

ಚೀನಾ ಕ್ರಾಂತಿಯನಂತರ ಸ್ವತಂತ್ರ, ಸ್ವಾವಲಂಬಿ, ಸುಭದ್ರವಾದ ಆರ್ಥಿಕ ಪ್ರಗತಿಯನ್ನು ಸಮಾಜವಾದಿ ತಳಹದಿಯಲ್ಲಿ ಸಾಧಿಸಲು ಅನೇಕ ಎಡರುಗಳನ್ನು ಎದುರಿಸಬೇಕಾಯಿತು. ದೀರ್ಘಕಾಲದ ಸಾಮ್ರಾಜ್ಯಶಾಹಿಗಳ ವೈರತ್ವ, ಮುಂದೆ ಸೋವಿಯತ್ ಯೂನಿಯನಿನ ಅಸಹಕಾರ, 60ರ ದಶಕದಲ್ಲಿನ 'ಸಾಂಸ್ಕೃತಿಕ ಕ್ರಾಂತಿ'ಯ ಅತಿರೇಕಗಳು, ಬರಗಾಲ, ಮಹಾಪೂರ, ಭೂಕಂಪ ಮುಂತಾದ ನೈಸರ್ಗಿಕ ವಿಕೋಪಗಳು, ಇತ್ಯಾದಿ ಭಾರೀ ಸಮಸ್ಯೆಗಳಿದ್ದರೂ ಜನತಾ ಚೀನಾ ಕಳೆದ 33 ವರ್ಷಗಳಲ್ಲೇ ಸರ್ವತೋಮುಖವಾಗಿ ಅದ್ಭುತ ಪ್ರಗತಿ ಸಾಧಿಸಿರುವುದು ಆಶ್ಚರ್ಯವಾಗಿದೆ. ಚೀನಾದಲ್ಲಿ ಸಮಾಜವಾದಿ ಪದ್ಧತಿಯು ಅವಸಾನಗೊಳ್ಳುವುದೆಂದು ನಿರೀಕ್ಷಿಸಿದವರೆಲ್ಲರೂ ಇಂದು ನಿರಾಶರಾಗಬೇಕಾಗಿದೆ. ಮೊದಲು ವೈರಸಾಧಿಸುತ್ತಿದ್ದ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಇಂದು ಚೀನಾದ 100 ಕೋಟಿ ಜನ ಸಂಖ್ಯೆ ಇರುವ ಮಾರುಕಟ್ಟೆಯ ಪ್ರಯೋಜನ ಪಡೆಯಲು ತೀವ್ರ ಪೈಪೋಟಿ ನಡೆಸುತ್ತಿವೆ!

ಚೀನಾದಲ್ಲಿ ಇಂದು ಸಮಾಜವಾದಿ ವ್ಯವಸ್ಥೆಯಲ್ಲಿ ಭದ್ರವಾಗಿದೆ. ಸ್ವಯಂ ಟೀಕೆ, ಪುನರ್ವಿಮರ್ಶೆಗಳಿಂದ ಚೀನಾದ ಕಮ್ಯುನಿಸ್ಟ್ ಪಕ್ಷವು ತನ್ನ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ದೇಶವನ್ನು ಇನ್ನಷ್ಟು ಪ್ರಗತಿಪಥದತ್ತ ನಿರ್ದೇಶಿಸುತ್ತಿದೆ ಪರಿಣಾಮವಾಗಿ, ಇಂದು ಚೀನಾ ಪ್ರಪಂಚದಲ್ಲಿ ಒಂದು ಬಲಿಷ್ಠ ಆರ್ಥಿಕ, ರಾಜಕೀಯ, ಮಿಲಿಟರಿ, ಸಮಾಜವಾದಿ ಶಕ್ತಿಯಾಗಿ ಬೆಳೆದು ನಿಂತಿದೆ.

ಚೀನಾದ ಕಮ್ಯುನಿಸ್ಟ್ ಪಕ್ಷವು ತನ್ನ 12ನೇ ಅಧಿವೇಶನದಲ್ಲಿ ಹೇಳಿಕೊಂಡಂತೆ, ಈ ದೇಶದಲ್ಲಿ ಈಗ ಸಾಮಾಜಿಕ ಗೊಂದಲದ ವರ್ಷಗಳು ಕೊನೆಗೊಂಡಿವೆ, ಸ್ಥಿರತೆ, ಐಕ್ಯತೆ, ಕ್ರಿಯಾಶೀಲತೆ ಇರುವ ರಾಜಕೀಯ ಪರಿಸ್ಥಿತಿ ಉಂಟಾಗಿದೆ. ಸಮಾಜವಾದಿ ಪ್ರಜಾಸತ್ತೆ ಮತ್ತು ಕಾನೂನು ವ್ಯವಸ್ಥೆ ಕ್ರಮೇಣ ಪರಿಪೂರ್ಣಗೊಳ್ಳುತ್ತಿದೆ. ಅಲ್ಲಿನ ವಿವಿಧ ರಾಷ್ಟ್ರೀಯತೆಗಳ ನಡುವೆ ಸಮಾನತೆ, ಐಕ್ಯತೆ ಹೊಸದಾಗಿ ಸಾಧಿಸಲಾಗಿದೆ; ರಾಷ್ಟ್ರಪ್ರೇಮಿ ಐಕ್ಯರಂಗವನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಸಾಂಸ್ಕೃತಿಕ ಕ್ರಾಂತಿಯ ಅವಧಿಯಲ್ಲಿ ಮಾಡಿದ ತಪ್ಪುಗಳನ್ನು ಆಂತರಿಕ ಧೋರಣೆಗಳಲ್ಲಿ ತಿದ್ದುಪಡಿ ಮಾಡಿಕೊಂಡಂತೆಯೇ ಅಂತರರಾಷ್ಟ್ರೀಯ ಧೋರಣೆಯಲ್ಲಿಯೂ ಆದೀತೆಂದು ಚೀನಾದ ಹಿತಚಿಂತಕರೆಲ್ಲರ ಹಾರೈಕೆ.

ಉತ್ಪಾದನೆಯಲ್ಲಿ ಅದ್ಭುತ ಪ್ರಗತಿ :

ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಗಳಲ್ಲಿ ಚೀನಾ ಅದ್ಭುತ ಸಾಧನೆ ಮಾಡಿರುವುದನ್ನು ಭಾರತಕ್ಕೆ ಹೋಲಿಸಿ ಈ ಕೆಳಗಿನ ಕೆಲವು ಅಂಕಿ ಸಂಖೆಗಳಿಂದ ತಿಳಿಯಬಹುದು.

	ಚೀನಾ : 1981	ಭಾರತ
ಉಕ್ಕು	: 35.6 ಮಿ. ಟನ್	5.3 ಮಿ. ಟನ್ (1979-80)
ವಿದ್ಯುತ್	: 309300 ಮಿ.kwh	89080 ಮಿ.kwh (1979-80)
ಕಲ್ಲಿದ್ದಲು	: 620 ಮಿ. ಟನ್	114 ಮಿ. ಟನ್ (1980-81)
ಕಚ್ಚಾ ತೈಲ	: 101.22 ಮಿ. ಟನ್	11.77 ಮಿ. ಟನ್ (1979-80)
ಸಿಮೆಂಟ್	: 84 ಮಿ. ಟನ್	—
ರಸಗೊಬ್ಬರ	: 12 ಮಿ. ಟನ್	0.58 ಮಿ. ಟನ್ (5.00 ಮಿ. ಟನ್ ಆಮದು!)
ಆಹಾರ ಧಾನ್ಯಗಳು	: 325 ಮಿ. ಟನ್	134 ಮಿ. ಟನ್ (1980–81)

(ಚೀನಾದ ಅಂಕೆ ಸಂಖ್ಯೆಗಳ ಆಧಾರ ಅಲ್ಲಿಯ ಕಮ್ಯುನಿಸ್ಟ್ ಪಾರ್ಟಿಯ 12ನೇ ಅಧಿವೇಶನದ ವರದಿ. ಭಾರತದ ಅಂಕೆ ಸಂಖ್ಯೆಗಳ ಆಧಾರ 1981ರ ಮನೋರಮಾ ವಾರ್ಷಿಕ ಪುಸ್ತಕ.)

ಚೀನಾದಲ್ಲಿ ವಿದೇಶಿ ವ್ಯಾಪಾರದ ಪಾತ್ರ ಗೌಣವಾಗಿದೆ. ನೂರು ಕೋಟಿ ಜನಸಂಖ್ಯೆ ಇರುವ ಆಂತರಿಕ ಮಾರುಕಟ್ಟೆಯೇ ಚೀನಾದ ಆರ್ಥಿಕ ಪ್ರಗತಿಗೆ ಮೂಲಾಧಾರ. ಆಂತರಿಕ ಮಾರುಕಟ್ಟೆಯ ಅಗತ್ಯಕ್ಕನುಗುಣವಾಗಿ 1978-81ರ ಅವಧಿಯಲ್ಲಿ ಘನ ಉದ್ಯಮ (*Heavy Industry*) ಕ್ಕಿಂತ ಹಗುರ ಕೈಗಾರಿಕೆಗೆ (*Light Industry*) ಹೆಚ್ಚಿನ ಪ್ರಾಶಸ್ತ್ಯ ಕೊಡಲಾಯಿತು. ಹಗುರ ಕೈಗಾರಿಕಾ ಉತ್ಪಾದನೆಯು ವರ್ಷಕ್ಕೆ ಶೇ. 14ರ ದರದಲ್ಲಿ ಹೆಚ್ಚಾಯಿತು. ಈ ಕ್ಷೇತ್ರದ ಉತ್ಪಾದನೆಯು ಒಟ್ಟು ಕೈಗಾರಿಕಾ ಉತ್ಪಾದನೆಯ ಶೇ. 42.7 (1978) ರಿಂದ ಶೇ. 51.4 (1981) ರಷ್ಟು ಹೆಚ್ಚಾಯಿತು. ಘನ ಉದ್ಯಮ ಕ್ಷೇತ್ರದಲ್ಲಿ ಘನ ಉದ್ಯಮಕ್ಕೆ ಬೇಕಾದ ಯಂತ್ರೋಪಕರಣಗಳನ್ನು ಉತ್ಪಾದಿಸುವ ಬದಲು ಹಗುರ ಕೈಗಾರಿಕೆಗಳಿಗೆ ಬೇಕಾದ ಯಂತ್ರೋಪಕರಣಗಳನ್ನು ಉತ್ಪಾದಿಸಲಾಯಿತು. ಇದರಿಂದಾಗಿ ಈ ಮೂರು ವರ್ಷಗಳ ಅವಧಿಯಲ್ಲಿ ಕೆಲವು ಕೈಗಾರಿಕೆಗಳ ಉತ್ಪಾದನೆಯಲ್ಲಿ ಸಾಧಿಸಿದ ಹೆಚ್ಚಳವನ್ನು ಈ ಕೆಳಗಿನ ಅಂಕಿ ಅಂಶಗಳಿಂದ ತಿಳಿಯಬಹುದು. ಹತ್ತಿ ಬಟ್ಟೆ : 29.4%, ಸಕ್ಕರೆ : 38.7%, ದ್ವಿಚಕ್ರವಾಹನಗಳು : 105.4%, ಹೊಲಿಗೆ ಯಂತ್ರಗಳು : 113.6%, ಕೈಗಡಿಯಾರಗಳು : 12.6%, ಟಿ. ವಿ. ಸೆಟ್ಟುಗಳು ; 943.3%, ಸಿಮೆಂಟ್ : 28.8%, ಮಾಂಸ : 47.02, ಚಹಾ: 28.0% ಈ ಹೊಸ ಧೋರಣೆ ಹಾಗೂ ಅದ್ಭುತ ಸಾಧನೆಯಿಂದಾಗಿ ಚೀನಾದ ಜನರ ಜೀವನಮಟ್ಟವು ಹೆಚ್ಚುವಂತಾಯಿತು. ಅವರಿಗೆ ಆಹಾರ, ಪಾನೀಯ, ವಸತಿ, ಸಾರಿಗೆ, ಸಂಪರ್ಕ, ಬಟ್ಟೆ, ಮತ್ತಿತರ ಅಗತ್ಯ ವಸ್ತುಗಳೂ ಸೇವಾ ಸೌಲಭ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ಸಿಗುವಂತಾಯಿತು. ಉತ್ಪಾದನೆಯಲ್ಲಿನ ಅಸಮಾನತೆಯನ್ನು ಹೋಗಲಾಡಿಸಿದಂತಾಯಿತು.

ಆಹಾರೋತ್ಪಾದನೆಯಲ್ಲಿ ಅಸಾಧಾರಣ ಸಾಧನೆ:

ಚೀನಾದ ಕಮ್ಯುನಿಸ್ಟ್ ಪಾರ್ಟಿಯ 12ನೇ ಅಧಿವೇಶನದಲ್ಲಿ ಕೃಷಿ, ಇಂಧನ, ಸಾರಿಗೆ, ಶಿಕ್ಷಣ ಮತ್ತು ವಿಜ್ಞಾನ ಇವುಗಳಿಗೆ ಮುಂದಿನ ವರ್ಷಗಳಲ್ಲಿ ಮಹತ್ವದ ಆದ್ಯತೆ ನೀಡಲು ನಿರ್ಧರಿಸಲಾಯಿತು. ಇನ್ನು 18 ವರ್ಷಗಳ, ಈ ಶತಮಾನ್ಯಾಂತ್ಯದಲ್ಲಿ ದೇಶದ ರಾಷ್ಟ್ರೀಯ ಉತ್ಪಾದನೆಯನ್ನು 710 ಬಿಲಿಯನ್ ಯ್ಯುಯಾನ್‌ಗಳಿಂದ 2800 ಬಿಲಿಯನ್ ಯ್ಯುಯಾನ್ (*Yuan*— ಚೀನಾದ ನಾಣ್ಯಗಳಷ್ಟು) ಅಂದರೆ ನಾಲ್ಕುಪಾಲು ಹೆಚ್ಚಿಸಬೇಕೆಂದು ಕರೆಕೊಡಲಾಯಿತು. (2800 ಬಿಲಿಯನ್ ಯ್ಯುಯಾನ್-1500 ಸಾವಿರ ಕೋಟಿ ರೂಪಾಯಿಗಳು. ಭಾರತದ ಈಗಿನ ರಾಷ್ಟ್ರೀಯ ಉತ್ಪಾದನೆಯ 60 ಪಾಲು !) ಇದಕ್ಕನುಗುಣವಾಗಿ ಆರ್ಥಿಕ ಯೋಜನೆಯನ್ನು ರೂಪಿಸಲಾಗುತ್ತಿದೆ. ಚೀನಾದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯೇ ಪ್ರಧಾನವಾದುದು. ಕೃಷಿ ಕ್ಷೇತ್ರದಲ್ಲಿ ಪ್ರಗತಿ ಆದಂತೆ, ಇತರ ಕ್ಷೇತ್ರಗಳಲ್ಲಿಯೂ ಪ್ರಗತಿ ಸಾಧಿಸಲು ಸಾಧ್ಯ. ಚೀನಾದ ಬಡ ರೈತರು ಕ್ರಾಂತಿಕಾರಿಗಳಾಗಿ ಕಮ್ಯುನಿಸ್ಟ್ ಸಮಾಜ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಈ ಶತಮಾನದ ಒಂದು ಅತ್ಯದ್ಭುತ ಸಾಧನೆಯಾಗಿದೆ. ಕ್ರಾಂತಿಯನಂತರ ಇವರು ಕೃಷಿ ಉತ್ಪಾದನೆಯಲ್ಲಿ ಅಸಾಧಾರಣ ಸಾಧನೆ ಮಾಡಿದ್ದಾರೆ.

ಚೀನಾದ ಜನಸಂಖ್ಯೆ ಜಗತ್ತಿನ ಜನಸಂಖ್ಯೆಯ ಶೇ. 24 ಆಗಿದ್ದರೂ ಅದರ ವ್ಯವಸಾಯ ಭೂಮಿಯು ಜಗತ್ತಿನ ಶೇ. 7ರಷ್ಟೇ ಆಗಿದೆ. ಚೀನಾದ ಜನರ ಸರಾಸರಿ ವ್ಯವಸಾಯ ಭೂಮಿ 0.1 ಹೆಕ್ಟೇರ್, ಭಾರತದ ಜನರ ಸರಾಸರಿ 2.0 ಹೆಕ್ಟೇರ್ ಮತ್ತು ಜಾಗತಿಕ ಸರಾಸರಿ 4.0 ಹೆಕ್ಟೇರ್. ಇಂದಿಗೂ ಚೀನಾದ ವ್ಯವಸಾಯ ಭೂಮಿಯ ಅರ್ಧದಷ್ಟು, ಅಂದರೆ 100 ಮಿ. ಹೆಕ್ಟೇರುಗಳಷ್ಟೇ ನೀರಾವರಿಗೊಳಗಾಗಿದೆ. ಇಂಧನ, ವಿದ್ಯುತ್, ಯಂತ್ರೋಪಕರಣಗಳ ಬಳಕೆಯು ಜಾಗತಿಕ ಮಟ್ಟಕ್ಕಿಂತ ಬಹಳ, ಕಡಿಮೆ ಇದೆ. ದಕ್ಷಿಣ ಚೀನಾದಲ್ಲಿ ವ್ಯವಸಾಯ ಹೆಚ್ಚಾಗಿ ಮಾನವ ಹಾಗೂ ಪ್ರಾಣಿಗಳ ಶ್ರಮ ಶಕ್ತಿಯನ್ನೇ ಆಧರಿಸಿದೆ. ದೊರಗು ಮೈ, ಮಳೆ ಹಾಗೂ ತೇವಗಳ ಕೊರತೆ, ಮಣ್ಣು ಕೊರೆತ, ದೇಶದ ಮೂರನೇ ಒಂದು ಭಾಗ ಖಾಯಂ ಬರಗಾಲ ಪ್ರದೇಶ, ಈ ಎಲ್ಲಾ ಕಾರಣಗಳಿಂದ ಚೀನಾದಲ್ಲಿ ವ್ಯವಸಾಯ ಭೂಮಿಯ ವಿಸ್ತೀರ್ಣ ಹೆಚ್ಚಿಸಲು ಅವಕಾಶ ತೀರಾ ಕಡಿಮೆ. ಆದುದರಿಂದ, ಚೀನಾದ ಕೃಷಿ ಉತ್ಪಾದನೆಯ ಅಭಿವೃದ್ಧಿಗೆ ದೇಶದ ದಕ್ಷಿಣ ಭಾಗವನ್ನು, ವ್ಯವಸಾಯ ಭೂಮಿಯ ಶೇ. 47ರಷ್ಟನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿದೆ. ಈ ಪ್ರದೇಶದಲ್ಲಿ ಗುಡ್ಡ ಕಾಡುಗಳನ್ನು ಬಿಟ್ಟರೆ ಪ್ರತಿ ಒಂದು ಇಂಚು ಭೂಮಿಯನ್ನು ವ್ಯವಸಾಯಕ್ಕೆ ಬಳಸಲಾಗಿದೆ. ಸಾಂದ್ರ ವ್ಯವಸಾಯ (Intcusive cultivation) ಪದ್ಧತಿಯಿಂದಾಗಿ ಪ್ರತಿ ಒಂದು ಕಮ್ಯೂನ್‌ಗಳೂ ಅತ್ಯಧಿಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಶಕ್ತಿ ಮೀರಿ ಶ್ರಮಿಸುತ್ತಿವೆ.

(ಮುಂದುವರೆಯುವುದು)

ಕೇಂದ್ರ ಸಮಿತಿಯ ವರದಿ :

ಕಾಂಗ್ರೆಸ್ (ಐ) ನಲ್ಲಿ ಭಿನ್ನಮತ

(14-11-82ರ ಸಂಚಿಕೆಯಿಂದ)

ಇತ್ತೀಚಿನ ದಿನಗಳಲ್ಲಿ ಆಳುವ ಕಾಂಗ್ರೆಸ್ (ಐ) ಪಕ್ಷವು ಆಂತರಿಕವಾದ ಅನೇಕ ತೊಂದರೆಗಳನ್ನೆದುರಿಸುತ್ತಿರುವುದು ಇನ್ನೊಂದು ಪ್ರಮುಖ ಬೆಳವಣಿಗೆ. ಹೆಚ್ಚು ಕಡಿಮೆ ಇಂತಹದೇ ಸಮಸ್ಯೆ ಇತರ ಎಲ್ಲಾ ಬೂರ್ಶ್ವಾ ವಿರೋಧ ಪಕ್ಷಗಳಲ್ಲೂ ಇದೆ. ಆದರೆ ಕಾಂಗ್ರೆಸ್ (ಐ) ಅಧಿಕಾರದಲ್ಲಿರುವ ಪಕ್ಷವಾದ ಕಾರಣ ಪಕ್ಷದೊಳಗಿರುವ ಭಿನ್ನಮತವನ್ನು ತುಸುಮಟ್ಟಿಗೆ ಹದ್ದುಬಸ್ತಿನಲ್ಲಿರಿಸಿಕೊಳ್ಳಲು ಅದರ ಮುಖಂಡರಿಗೆ ಸಾಧ್ಯವಾಗಿದೆ. ಆದರೂ ಕಾಂಗ್ರೆಸ್ (ಐ) ಅಧಿಕಾರ ನಡೆಸುತ್ತಿರುವ ಹೆಚ್ಚಿನ ಎಲ್ಲ ರಾಜ್ಯಗಳಲ್ಲೂ ಆ ಪಕ್ಷ ತೀವ್ರವಾದ ಆಂತರಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದನ್ನು ಕಾಣಬಹುದು. ಪ್ರಬಲವಾಗಿರುವ ಭಿನ್ನಮತೀಯರ ಗುಂಪುಗಳು ಪಕ್ಷದ ಮುಂದಾಳುತ್ವಕ್ಕೆ ಸವಾಲೆಸೆದು ಅದನ್ನು ವಿರೋಧಿಸುತ್ತಿವೆ. ಕಾಂಗ್ರೆಸ್ (ಐ) ಹೈಕಮಾಂಡು ಇಂತಹ ಸಂದರ್ಭಗಳಲ್ಲಿ ತನ್ನ ಅಸಹಾಯುಕತೆಯನ್ನು ತೋರ್ಪಡಿಸಿದೆ.

ಕಾಂಗ್ರೆಸ್ (ಐ) ಮಹಾರಾಷ್ಟ್ರದಲ್ಲಿ ಎದುರಿಸಿದ ಬಿಕ್ಕಟ್ಟು ಅತ್ಯಂತ ಗಂಭೀರವಾದದ್ದು. ಇಲ್ಲಿ ಮುಖ್ಯ ಮಂತ್ರಿಯಾಗಿದ್ದ ಅಂಟುಲೆ ಪದತ್ಯಾಗ ಮಾಡುವಂತೆ ನಿರ್ದೇಶ ನೀಡಬೇಕಾಯಿತಷ್ಟೇ ಅಲ್ಲ. ಅಂಟುಲೆ ವಿರುದ್ಧ ದಾವೆ ಹೂಡಲು ರಾಜ್ಯ ಸರಕಾರಕ್ಕೆ ಅನುಮತಿಯನ್ನೂ ನೀಡಬೇಕಾಯಿತು. ಅಂತುಲೆ ನಡೆಸಿದ ಭ್ರಷ್ಟಾಚಾರ, ಖಾಸಗಿ ಟ್ರಸ್ಟ್‌ಗಳಿಗೆ ಕೋಟ್ಯಾಂತರ ರೂಪಾಯಿ ಸಂಗ್ರಹಿಸುವಲ್ಲಿ ಆತ ನಡೆಸಿದ ಅಕ್ರಮ, ಸಿಮೆಂಟ್ ಹಗರಣ ಇತ್ಯಾದಿಗಳೆಲ್ಲ ಬೆಳಕಿಗೆ ಬಂದ ಮೇಲೂ ಕಾಂಗ್ರೆಸ್(ಐ) ಮುಖಂಡತ್ವ ಅಂತುಲೆಯನ್ನು ಬಚಾಯಿಸಲು ಸಾಧ್ಯವಿದ್ದುದನ್ನೆಲ್ಲ ಮಾಡಿದೆ. ಆದರೆ ಹೈಕೋರ್ಟಿನ ತೀರ್ಪು ಅಂತುಲೆಗೆ ವಿರುದ್ಧವಾದ ಮೇಲೆ ಮತ್ತೇನೂ ಮಾಡಲೂ ಸಾಧ್ಯವಿರಲಿಲ್ಲ. ಅಂತುಲೆಯನ್ನು ಉಳಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎನಿಸಿದ ಮೇಲೆ ಆತ ತೊಲಗಬೇಕಾಯಿತು. ಅಂತುಲೆ ಪದತ್ಯಾಗ ಮಾಡಿದುದೇ ಇನ್ನೊಂದು ಸಮಸ್ಯೆಯಾಗಿ ಬೆಳೆದು ಮಹಾರಾಷ್ಟ್ರ ಕಾಂಗ್ರೆಸ್ (ಐ) ಪಕ್ಷದಲ್ಲಿ ಇನ್ನಷ್ಟು ಒಡಕಿಗೆ ಅವಕಾಶ ಮಾಡಿಕೊಟ್ಟಿದೆ.

ಮಹಾರಾಷ್ಟ್ರದ ಅಂತುಲೆಯ ಹಗರಣವೊಂದೇ ಅಲ್ಲ. ಅಂತುಲೆಯ ಉತ್ತರಾಧಿಕಾರಿಯಾಗಿ ಬಂದ ಭೋಸಲೆ, ಗುಂಡೂರಾವ್, ಅಂಜಯ್ಯ, ಜೆ. ಬಿ. ಪಟ್ನಾಯಕ್ ಮುಂತಾದ ಕಾಂಗ್ರೆಸ್ (ಐ) ಪಕ್ಷದ ಮುಖ್ಯಮಂತ್ರಿಗಳು ಮತ್ತು ಮಾಜಿ ಮುಖ್ಯಮಂತ್ರಿಗಳು, ಇವರೆಲ್ಲರ ವಿರುದ್ಧವೂ ಅವರದೇ ಪಕ್ಷದ ಸದಸ್ಯರು ಭ್ರಷ್ಟಾಚಾರದ ಆರೋಪ ಹೊರಿಸುತ್ತಿದ್ದಾರೆ. ಅಧಿಕಾರದಲ್ಲಿರುವ ಮಂದಿ ನಡೆಸುತ್ತಿರುವ ಭ್ರಷ್ಟಾಚಾರ, ಅಧಿಕಾರದಲ್ಲಿಲ್ಲದಿರುವ ಮತ್ತು ಭ್ರಷ್ಟಾಚಾರದ ಎಂಜಲಿನಲ್ಲಿ ಪಾಲುಪಡೆಯಲಾರದ ಜನರನ್ನು ಭಿನ್ನಮತೀಯರನ್ನಾಗಿ ಪರಿವರ್ತಿಸುತ್ತಿದೆ. ಈ ಭಿನ್ನಮತ, ಒಡಕು ಎಷ್ಟು ತೀವ್ರವಾಗಿದೆಯೆಂದರೆ ಹಲವಾರು ರಾಜ್ಯಗಳಲ್ಲಿ ರಾಜ್ಯ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ನ ಅಧಿಕೃತ ಅಭ್ಯರ್ಥಿಗಳು ಸೋಲಿಸಲ್ಪಟ್ಟಿದ್ದಾರೆ, ಇಲ್ಲವೇ ಒಂದೆರಡು ಮತಗಳಿಂದ ಹಾಗೂ ಹೀಗೂ ಗೆದ್ದಿದ್ದಾರೆ.

ಪ್ರಧಾನಿಯ ಸೊಸೆ ಮೇನಕಾ ಗಾಂಧಿ ತನ್ನ ಅತ್ತೆಯ ವಿರುದ್ಧ ಸಿಡಿದೇಳುವ ಮೂಲಕ ಈ ಭಿನ್ನಮತೀಯರ ಸಮಸ್ಯೆಗೆ ಹೊಸತೊಂದು ಆಯಾಮವನ್ನೇ ಕೊಟ್ಟಿದ್ದಾಳೆ. ತೀರಿ ಹೋದ ತನ್ನ ಗಂಡನ ಹೆಸರನ್ನು ಬಳಸಿಕೊಳ್ಳುತ್ತಿರುವ ಆಕೆ ಆ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಭಿನ್ನಮತೀಯರನ್ನು ಕಲೆಹಾಕಲು ಪ್ರಯತ್ನಿಸುತ್ತಿದ್ದಾಳೆ. ಈ 'ಮೇನಕಾ' ಹಗರಣ ಮತ್ತು 'ಅಂತುಲೆ' ಹಗರಣಗಳು ಒಟ್ಟಾಗಿ ಕಾಂಗ್ರೆಸ್ (ಐ) ನ ಆಂತರಿಕ ಬಿಕ್ಕಟ್ಟು ಮತ್ತು ಸಮಗ್ರತೆಗೆ ಗಂಭೀರ ಬೆದರಿಕೆಯನ್ನು ಒಡ್ಡುವುದೆಂದು ಶಂಕಿಸಲಾಗಿದೆ.

ಕಾಂಗ್ರೆಸ್ (ಐ) ನಲ್ಲಿ ಮತ್ತೊಂದು ವಿಭಜನೆಯುಂಟಾಗಲು ಇದು ಕಾರಣವಾದೀತೇ ಎಂದು ಈಗಲೇ ಹೇಳಲು ಸಾಧ್ಯವಿಲ್ಲ, ಇಂತಹ ವಿಭಜನೆ ನಡೆಯದಂತೆ ಮಾಡುವ ಕಾರಣವೊಂದಿದೆ. ಭಿನ್ನಮತಿಯರಲ್ಲಿ ಯಾರಿಗೂ ಸ್ವತಂತ್ರವಾದ ಒಂದು ಸಾಮೂಹಿಕ ನೆಲೆ ಇಲ್ಲ. ಅವರೆಲ್ಲ 'ಅಮ್ಮಾವ್ರ' ಕೃಪೆಯ ಮೇಲೆ ಎಷ್ಟು ಅವಲಂಬಿತರಾಗಿದ್ದಾರೆಂದರೆ ಪ್ರಾಯಶಃ ಅವರಲ್ಲಿ ಯಾರೊಬ್ಬನೂ ಪಕ್ಷದ ವಿರುದ್ಧ ಸಿಡಿದೇಳುವ ಧೈರ್ಯ ತೋರಿಸಲಾರ. ಈ ಪ್ರಶ್ನೆಗೆ ಇನ್ನೂ ಒಂದು ಮುಖ ಇದೆ- ಕಾಂಗ್ರೆಸ್ (ಐ) ಪಕ್ಷದ ಮುಖಂಡತ್ವ ಭಿನ್ನಮತೀಯರ ವಿರುದ್ಧ ಏನೊಂದೂ ಕ್ರಮಕೈಗೊಳ್ಳಲು ಅಶಕ್ತವಾಗಿದೆ. ಇತ್ತೀಚೆಗೆ ಹರ್ಯಾಣಾದ ಚುನಾವಣೆಯ ವೇಳೆ ಶಿಸ್ತಿನ ಕ್ರಮ ಕೈಗೊಳ್ಳಲಾದ ಸದಸ್ಯರನ್ನು ಚುನಾವಣೆ ಮುಗಿದ ಮೇಲೆ ಕ್ಷಮಿಸಲಾಗಿದೆ; ಇವರಲ್ಲಿ ಕೆಲವರನ್ನು ಮಂತ್ರಿ ಮಂಡಳದಲ್ಲೂ ಸೇರಿಸಲಾಗಿದೆ!

ಕ್ಷೀಣಿಸುತ್ತಿರುವ ಕಾಂಗ್ರೆಸ್ (ಐ) ಪ್ರಭಾವ

ಈ ನಡುವೆ ಜನ ಸಾಮಾನ್ಯರ ಮಧ್ಯೆ ಆಳುವ ಪಕ್ಷದ ಪ್ರತಿಷ್ಠೆ ಭರದಿಂದ ಕುಸಿಯುತ್ತಿದೆ. ಕಾಂಗ್ರೆಸ್ (ಐ) ತಮಗೇನಾದರೂ ಉಪಯೋಗವಾಗಬಲ್ಲ ಪಕ್ಷವೆಂಬುದಾಗಿ ಜನ ಈಗ ಭಾವಿಸುತ್ತಿಲ್ಲ. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯುಂಟುಮಾಡುವುದಾಗಿ ಆಳುವ ಪಕ್ಷ ನೀಡಿದ್ದ ಆಶ್ವಾಸನೆ ಪೊಳ್ಳಾಗಿದೆ ಮಾತ್ರವಲ್ಲ ಆಡಳಿತ ವ್ಯವಸ್ಥೆಯ ಮುಖ್ಯಸ್ಥನಾಗಿ ಕಾಂಗ್ರೆಸ್ (ಐ) ತನ್ನ ರಾಜಕೀಯ ವಿಶ್ವಾಸಾರ್ಹತೆಯನ್ನು ತೀವ್ರವಾಗಿ ಕಳೆದುಕೊಳ್ಳುತ್ತಿದೆ.

ಧಕಾಯಿತರ ಸಮಾಜ ವಿರೋಧಿ ಚಟುವಟಿಕೆಗಳನ್ನು ಕೊನೆಗೊಳಿಸುವಲ್ಲಿ ತನ್ನ ಆಡಳಿತ ಯಂತ್ರ ವಿಫಲವಾಗಿದೆಯೆಂಬ ಒಂದು ಕಾರಣಕ್ಕಾಗಿ ರಾಜ್ಯದ ಮುಖ್ಯ ಮಂತ್ರಿಯೊಬ್ಬ ರಾಜೀನಾಮೆ ಕೊಡಬೇಕಾಗಿ ಬಂದಂತಹ ಘಟನೆ ಈ ಹಿಂದೆ ಎಂದೂ ನಡೆದಿರಲಿಲ್ಲ. ಈ ದೃಷ್ಟಿಯಿಂದ ನೋಡುವುದಾದರೆ ಈ ರಾಜ್ಯದ ಮುಖ್ಯ ಮಂತ್ರಿ ಪದವಿಗೆ ಬರಲು ಆಡಳಿತ ಪಕ್ಷದಲ್ಲಿರುವ ಯಾರಿಗಾದರೂ ಅರ್ಹತೆಯಿದೆಯೇ ಎನ್ನುವುದೂ ಸಂದೇಹಾಸ್ಪದ.

ಯಾಕೆಂದರೆ ಉತ್ತರ ಪ್ರದೇಶದ ಪರಿಸ್ಥಿತಿ ಈಗಿನ ಹೊಸ ಮುಖ್ಯಮಂತ್ರಿಯ ಆಳ್ವಿಕೆಯಲ್ಲಿ ಹಿಂದಿಗಿಂತ ಬೇರೆಯೇನೂ ಆಗಿಲ್ಲ. ಉತ್ತರ ಪ್ರದೇಶದ ನೆರೆ ರಾಜ್ಯವಾದ ಬಿಹಾರ್‌ನಲ್ಲಿ ಎಲ್ಲ ವಿರೋಧ ಪಕ್ಷಗಳೂ, ಜನ ಸಾಮಾನ್ಯರು ಮತ್ತು ಸ್ವತಃ ಆಳುವ ಪಕ್ಷದೊಳಗೇ ಇರುವ ಅನೇಕ ವಿಭಾಗಗಳು ಪ್ರತ್ಯೇಕ ಪ್ರತ್ಯೇಕವಾಗಿ ಅಥವಾ ಒಟ್ಟಾಗಿ ಮುಖ್ಯ ಮಂತ್ರಿಯ ವಿರುದ್ಧ ಮತ್ತು ರಾಜ್ಯ ಸರಕಾರದ ವಿರುದ್ಧ ಚಳುವಳಿ ನಡೆಸುತ್ತಿದ್ದಾರೆ. ಈ ಎಲ್ಲಾ ರಾಜ್ಯಗಳಲ್ಲೂ ಮತ್ತು ಕಾಂಗ್ರೆಸ್ (ಐ) ಆಡಳಿತ ನಡೆಸುತ್ತಿರುವ ಇತರ ರಾಜ್ಯಗಳಲ್ಲೂ ಆಳುವ ಪಕ್ಷದ ಎಂ.ಪಿ.ಗಳು, ವಿಧಾನ ಸಭಾ ಸದಸ್ಯರು ಮತ್ತಿತರ ಕಾರ್ಯಕರ್ತರಿಗೆ ಕಾಳಸಂತೆಕೋರರು, ಕಳ್ಳ ಸಾಗಾಣಿಕೆಗಾರರು, ಧಕಾಯಿತರು, ಹೆಂಗಸರ ಮೇಲೆ ಅತ್ಯಾಚಾರ ನಡೆಸುವ ಮತ್ತು ದುರ್ಬಲ ವರ್ಗದ ಜನರ ಮೇಲೆ ಅನ್ಯಾಯ ನಡೆಸುವ ಸಮಾಜ ವಿರೋಧಿ ಗುಂಪುಗಳ ಜೊತೆಗೆ ಸಂಬಂಧವಿರುವುದು ಬಹಿರಂಗವಾಗುತ್ತಿದೆ.

ದೇಶದ ರಾಜಧಾನಿಯಾದ ನವದೆಹಲಿ ಹಗಲು ದರೋಡೆ, ಕೊಲೆ, ವಧೂದಹನ ಮತ್ತಿತರ ಸಮಾಜ ವಿರೋಧಿ ಕೃತ್ಯಗಳಿಗಾಗಿ ಸಾಕಷ್ಟು ಕುಖ್ಯಾತವಾಗುತ್ತಿದೆ. ಇಂತಹ ಹೆಚ್ಚಿನ ಅಪರಾಧಗಳಲ್ಲಿ ಕಾಂಗ್ರೆಸ್(ಐ) ಪಕ್ಷದ ಪ್ರಮುಖ ಮುಂದಾಳುಗಳಿಲ್ಲದಿದ್ದರೂ ಆ ಪಕ್ಷದ ಜೊತೆಗೆ ನಿಕಟ ಸಂಪರ್ಕವಿರುವ ಮಂದಿ ಭಾಗಿಗಳಾಗಿರುತ್ತಾರೆ. ರಾಜಕೀಯ ಭ್ರಷ್ಟಾಚಾರದ ವಿಷಯದಲ್ಲಂತೂ ತಮ್ಮ ಪಕ್ಷದ ರಾಜಕಾರಣಿಗಳು ನಡೆಸಿರುವ ಅಕ್ರಮದ ಕುರಿತು ಸಂಸತ್ತಿನಲ್ಲಿ ಚರ್ಚೆ ಭುಗಿಲೇಳದಂತೆ ಮಾಡಲು ಆಳುವ ಪಕ್ಷದ ಮುಂದಾಳುಗಳು ಸಂಸತ್ತಿನ ನಿಯಮಗಳನ್ನೆಲ್ಲ ತಮಗೆ ಖುಶಿ ಬಂದಂತೆ ತಿರುವು ಮುರುವು ಮಾಡುತ್ತಿದ್ದಾರೆ. 'ಕುವೋ' ತೈಲದ ಹಗರಣ ಇದಕ್ಕೊಂದು ನಿದರ್ಶನ.

ಕಾಂಗ್ರೆಸ್ (ಐ) ಮಹಾರಾಷ್ಟ್ರದಲ್ಲಿ ಶಿವಸೇನೆಯ ಜೊತೆಗೆ ನಂಟು ಬೆಳೆಸಿದೆ. ಕೇರಳದಲ್ಲಿ ಆರೆಸ್ಸೆಸ್ ಮತ್ತಿತರ ಕೋಮುವಾದಿ ಮತ್ತು ಜಾತೀಯವಾದಿ ಶಕ್ತಿಗಳ ಜೊತೆ ಅದು ಶಾಮೀಲಾಗಿದೆ. ಆಂಧ್ರ ಪ್ರದೇಶದಲ್ಲಿ ನಕ್ಸಲೀಯರ ಜೊತೆಗೂ ತ್ರಿಪುರಾದಲ್ಲಿ ಆನಂದ ಮಾರ್ಗ ಮತ್ತು ಅಮ್ರ ಬಂಗಾಳಿಗಳ ಜೊತೆಗೂ ಅದು ಚಕ್ಕಂದವಾಡುತ್ತಿದೆ. ತನ್ನ ವಿರೋಧಿಗಳ ಅದರಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಹೋರಾಡಬೇಕಾದರೆ ಕಾಂಗ್ರೆಸ್ (ಐ) ಯಾರ ಜೊತೆಗಾದರೂ ಸಂದರ್ಭಸಾಧಕ ಮೈತ್ರಿ ಮಾಡಿಕೊಳ್ಳಲು ಮತ್ತು ಅದಕ್ಕಾಗಿ ತತ್ವಗಳನ್ನೆಲ್ಲ ಗಾಳಿಗೆ ತೂರಿಬಿಡುವುದಕ್ಕೂ ಸಿದ್ಧ.

ಇಂತಹ ಹಿನ್ನೆಲೆಯಲ್ಲಿ, ಪ್ರಜಾಪ್ರಭುತ್ವವನ್ನು ಸಂರಕ್ಷಿಸುವ ಉದ್ದೇಶದಿಂದ ಸಿ. ಪಿ. ಐ. (ಎಂ) ಎಲ್ಲಾ ವಿರೋಧ ಪಕ್ಷಗಳ ಜೊತೆಗೂಡಲು ಪ್ರಯತ್ನಿಸುತ್ತಿದೆ. ಅದೇ ವೇಳೆಗೆ ಇತರ ಬೂರ್ಶ್ವಾ ಭೂಮಾಲಿಕ ವರ್ಗದ ಪಕ್ಷಗಳ ಕಾರ್ಯಕ್ರಮಗಳಿಗೆ ವಿರುದ್ಧವಾದ ಪ್ರತ್ಯೇಕ ಕಾರ್ಯಕ್ರಮವೊಂದರ ನೆಲೆಯಲ್ಲಿ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಂದುಗೂಡಿಸಲೂ ಸಿ.ಪಿ.ಐ.(ಎಂ) ಪ್ರಯತ್ನಿಸುತ್ತಿದೆ ಮತ್ತು ಈ ಯತ್ನಗಳಿಗೆ ಸಾಕಷ್ಟು ಯಶಸ್ಸು ದೊರೆತಿದೆ.

"ಮಿನಿ ಮಹಾಚುನಾವಣೆ"ಯೆಂದು ಕರೆಯಲಾಗಿರುವ ಮೇ 19 ರ, ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಎಡರಂಗವು, ಐತಿಹಾಸಿಕ ಜಯಗಳಿಸಿದೆ. ಕೇರಳದ ಎಡ ಪ್ರಜಾಸತ್ತಾತ್ಮಕ ರಂಗವೂ ಗಣನೀಯ ಪ್ರಮಾಣದ ಯಶಸ್ಸುಗಳಿಸಿದೆ. ಗಢವಾಲ್ ಲೋಕ ಸಭಾ ಚುನಾವಣೆಯಲ್ಲಿ ಬಹುಗುಣ ಅವರು ಗಳಿಸಿದ ಅಮೋಘ ವಿಜಯ ಉಪ ಚುನಾವಣೆಗಳು ನಡೆದ ನಾಲ್ಕು ರಾಜ್ಯಗಳ ಪೈಕಿ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಸೋತಿರುವುದು, ಇವೆಲ್ಲ ಆಳುವ ಕಾಂಗ್ರೆಸ್ (ಐ) ಪಕ್ಷ ಅನುಭವಿಸಿರುವ ರಾಜಕೀಯ ಸೋಲಿನ ಚಿಹ್ನೆಗಳಾಗಿವೆ. ಎಡ ಮತ್ತು ಪ್ರಜಾಪ್ರಭುತ್ವ ರಂಗವು ಪ್ರಬಲವಾಗಿರುವ ರಾಜ್ಯಗಳಲ್ಲೆಲ್ಲ ಅವು ಗಮನಾರ್ಹ ಮುನ್ನಡೆ ಸಾಧಿಸಲು ಸಮರ್ಥವಾಗಿದ್ದರೆ, ಬೂರ್ಶ್ವಾ ವಿರೋಧ ಪಕ್ಷಗಳು ತಾವು ಸ್ವೀಕಾರಾರ್ಹ ಬದಲಿ ಪಕ್ಷಗಳಾಗಬಲ್ಲೆವೆಂಬುದನ್ನು ಜನತೆಯ ಮುಂದೆ ತೋರಿಸಿಕೊಡಲು ಸಂಪೂರ್ಣ ವಿಫಲವಾಗಿವೆ.

ಆಳುವ ಪಕ್ಷವು ವಿರೋಧ ಪಕ್ಷಗಳ ಮೇಲೂ, ಜನ ಸಾಮಾನ್ಯರ ಮೇಲೂ ತನ್ನ ಇಚ್ಛೆಯನ್ನು ಹೇರುವುದನ್ನು ತಡೆಯಬೇಕಾದರೆ ಚುನಾವಣೆಯ ನಂತರ ಎಲ್ಲಾ ವಿರೋಧ ಪಕ್ಷಗಳೂ ಐಕ್ಯಮತದಿಂದ ಕಾರ್ಯಾಚರಣೆಗಳನ್ನು ಮಾಡಬೇಕೆಂದು ಯೋಜಿಸಲಾಗಿತ್ತು. ಹಾಗಾಗಿ ಹರಿಯಾಣದ ಚುನಾವಣೆಗಳ ಬಳಿಕ ಕೈಗೊಳ್ಳಲಾದ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ವಿರುದ್ಧ ಐಕ್ಯ ಪ್ರತಿಭಟನೆಯನ್ನು ಸಂಘಟಿಸಲಾಯಿತು. ಇದರಲ್ಲಿ ಸಿ. ಪಿ. ಐ. (ಎಂ) ವಹಿಸಿದ ಪಾತ್ರವೂ ಸಣ್ಣದಲ್ಲ. ಸಂಜೀವರೆಡ್ಡಿ ಅವರ ಅಧಿಕಾರಾವಧಿ ಮುಗಿದ ಮೇಲೆ ಹೊಸ ರಾಷ್ಟ್ರಪತಿ ಚುನಾವಣೆ ನಡೆದ ಸಂದರ್ಭದಲ್ಲೂ ವಿರೋಧ ಪಕ್ಷಗಳು ಈ ಒಮ್ಮತದ ನಿಲುವೆಯನ್ನು ಕೈಗೊಳ್ಳುವ ಮೂಲಕ ಐಕ್ಯ ಕಾರ್ಯಾಚರಣೆಯನ್ನು ಮುಂದುವರಿಸಿವೆ. ಸಂಸತ್ತಿನಲ್ಲಿ ಎಲ್ಲ ವಿರೋಧ ಪಕ್ಷಗಳೂ ತಮ್ಮ ಚಟುವಟಿಕೆಗಳನ್ನು ಹೊಂದಿಸಿಕೊಂಡು ಹೋಗುತ್ತಿರುವುದರಿಂದಾಗಿ ಆಗಸ್ಟ್ 16 ರಂದು ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿ ಚರ್ಚಿಸಲು ಸಾಧ್ಯವಾಯಿತು.

ಹಲವಾರು ಪ್ರಶ್ನೆಗಳಲ್ಲಿ ಪಕ್ಷ ಮತ್ತು ರಾಜಕೀಯ ವ್ಯತ್ಯಾಸಗಳನ್ನು ಮೀರಿ ಐಕ್ಯ ಸಾಮೂಹಿಕ ಕಾರ್ಯಾಚರಣೆಗಳು ಬೆಳೆಯುತ್ತಿವೆ. ಪತ್ರಕರ್ತರನ್ನು ಪ್ರಜಾಸತ್ತಾತ್ಮಕ ಶಕ್ತಿಗಳನ್ನೂ ರಾಷ್ಟ್ರಮಟ್ಟದಲ್ಲಿ ಒಂದುಗೂಡಿಸಿದಂತಹ ಬಿಹಾರ್ ಪತ್ರಿಕಾ ಶಾಸನದ ವಿರುದ್ಧ ನಡೆದ ಐಕ್ಯ ಹೋರಾಟವನ್ನು ಇಲ್ಲಿ ವಿಶೇಷವಾಗಿ ಸ್ಮರಿಸಬಹುದು. ಪಾರ್ಲಿಮೆಂಟ್‌ನಲ್ಲೂ ಅನೇಕ ರಾಜ್ಯಗಳ ವಿಧಾನ ಮಂಡಲಗಳಲ್ಲೂ ಪತ್ರಕರ್ತರು ಪ್ರಶ್ನೋತ್ತರ ಕಾಲವನ್ನು ಬಹಿಷ್ಕರಿಸಿದುದೂ, ಈ ಕಾರ್ಯಕ್ರಮದೊಂದಿಗೆ ಹೆಚ್ಚಿನ ಎಲ್ಲ ಪ್ರತಿ ಪಕ್ಷಗಳೂ, ಗುಂಪುಗಳೂ ಸೌಹಾರ್ದ ವ್ಯಕ್ತಪಡಿಸಿರುವುದೂ ಈ ನಿಟ್ಟಿನಲ್ಲಿ ಒಂದು ಮಹತ್ತರ ಬೆಳವಣಿಗೆ. ಬಿಹಾರ್ ಪತ್ರಿಕಾ ಶಾಸನಕ್ಕೆ ವ್ಯಕ್ತಪಡಿಸಲಾದ ಈ ಸಂಯುಕ್ತ ಪ್ರತಿಭಟನೆಯನ್ನೆದುರಿಸಲು ಬಿಹಾರ್ ರಾಜ್ಯ ಸರಕಾರ ಲಾಠಿ ಚಾರ್ಜ್ ನಡೆಸಿದೆ. ಇದು ಆಳುವಪಕ್ಷದ ನೈತಿಕ ಅಧಃಪತನವನ್ನು ತೋರ್ಪಡಿಸುತ್ತದೆ. ಅದೇ ಕಾಲಕ್ಕೆ ಪತ್ರಕರ್ತರು ಒಂದು ದಿನದ ಪ್ರತಿಭಟನಾ ಮುಷ್ಕರದ ಕರೆ ನೀಡಿರುವುದು ಬೆಳೆಯುತ್ತಿರುವ ಪ್ರತಿಭಟನೆಯ ಸಂಕೇತವಾಗಿದೆ.

ಸಿ.ಪಿ.ಐ. (ಎಂ) ಪಾತ್ರ :

ಆಳುವ ಪಕ್ಷದ ಸರ್ವಾಧಿಕಾರಿ ಪ್ರವೃತ್ತಿಯ ವಿರುದ್ಧ ಐಕ್ಯ ಪ್ರತಿಭಟನೆಯ ಕಲ್ಪನೆಯನ್ನೇ ಸತತವಾಗಿ ವಿರೋಧಿಸುತ್ತಿದ್ದ ಸಿ.ಪಿ.ಐ. ಇತ್ತೀಚೆಗೆ ತನ್ನ ಮೊದಲಿನ ನಿಲುವೆಯನ್ನು

(7ನೇ ಪುಟ ನೋಡಿ)

ಎಸ್. ಎಫ್. ಐ. ಚಟುವಟಿಕೆಗಳು

ಸಿಂಧನೂರು :

ಚುನಾವಣೆಯಲ್ಲಿ ಗೆಲುವು

ನವೆಂಬರ್ 13 ರಂದು ಇಲ್ಲಿನ ಸರಕಾರಿ ಕಿರಿಯ ಮಹಾ ವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಎಸ್. ಎಫ್. ಐ. ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಎಸ್. ಎಫ್. ಐ ನ ಕಾಂ| ಹನುಮಂತರಾಯ ಮತ್ತು ಕ್ರೀಡಾ ಕಾರ್ಯದರ್ಶಿಯಾಗಿ ಕಾಂ| ಖಾದರಿಯವರು ಆಯ್ಕೆಯಾಗಿದ್ದಾರೆ.

ಫಲಿತಾಂಶ ಪ್ರಕಟವಾದೊಡನೆ ವಿದ್ಯಾರ್ಥಿಗಳು ಮೆರವಣಿಗೆ ಹೊರಡಿಸಿ ಎಸ್. ಎಫ್. ಐ. ಕಾರ್ಯಾಲಯಕ್ಕೆ ತೆರಳಿ ಅಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ| ಮಂಜುಳಾ, ವೆಂಕನಗೌಡ, ವೃಷಬೇಂದ್ರ ಮುಂತಾದವರು ಮಾತನಾಡಿದರು.

ವಿದ್ಯಾರ್ಥಿಸಂಘಕ್ಕೆ ಎಸ್.ಎಫ್.ಐ. ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಕ್ಕಾಗಿ ಸಿಂಧನೂರು ಘಟಕದ ಸಂಚಾಲಕ ಕಾಂ| ಮೋಹನ್ ಕುಮಾರ್ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಕುಂದಾಪುರ :

ವಿಚಾರ ಸಂಕಿರಣ

14-11-82 ರಂದು ಕುಂದಾಪುರದ ಸರಕಾರಿ ಕಿರಿಯ ಕಾಲೇಜಿನಲ್ಲಿ ಎಸ್. ಎಫ್. ಐ. ಟೌನ್ ಸಮಿತಿಯ ಆಶ್ರಯದಲ್ಲಿ 'ಮಕ್ಕಳ ದಿನಾಚರಣೆ'ಯ ಕುರಿತು ವಿಚಾರ ಗೋಷ್ಠಿ ನಡೆಯಿತು.

ಗೋಷ್ಠಿಯ ಅಧ್ಯಕ್ಷತೆಯನ್ನು ಕೆ. ವಾಸುದೇವ್ ನಾಯ್ಕ ವಹಿಸಿದ್ದರು. ವಾಸುದೇವ್ ಉಚ್ಚಿಲ್ ಮತ್ತು ಡಾ|| ಸುಶೀಲ ಇವರು ಪ್ರಬಂಧಗಳನ್ನು ಮಂಡಿಸಿದರು.

ಮಕ್ಕಳ ಕಾಯ್ದೆಯ ಕುರಿತು ವಾಸುದೇವ ಉಚ್ಚಿಲ್ ತನ್ನ ಪ್ರಬಂಧ ಮಂಡಿಸುತ್ತಾ, ಕಾನೂನು ಪ್ರಕಾರ ಮಕ್ಕಳಿಗಿರುವ ರಕ್ಷಣೆ ಬಗ್ಗೆ ತಿಳಿಸಿದರು. ಒಂದು ಕಡೆ ಮಕ್ಕಳನ್ನು ಕಾರ್ಮಿಕರನ್ನಾಗಿ ಸೇರಿಸಿಕೊಳ್ಳುವದನ್ನು ನಿಷೇಧಿಸಿದರೆ ಇನ್ನೊಂದೆಡೆ ಸರಕಾರದ ಮೂಗಿನಡಿಯಲ್ಲೇ ಕಾಯ್ದೆಯ ಉಲ್ಲಂಘನೆಯಾಗುತ್ತಿದೆ ಎಂದು ಅಪಾದಿಸಿದರು.

ಡಾ|| ಸುಶೀಲ ಅವರು ಮಾತನಾಡುತ್ತಾ, ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಒಂದು ವರ್ಷದಲ್ಲಿ ಹುಟ್ಟಿದ 1000 ಮಕ್ಕಳಲ್ಲಿ 125 ಮಕ್ಕಳು ಮರಣ ಹೊಂದುತ್ತಿರುವ ಗಂಭೀರ ಪರಿಸ್ಥಿತಿ ಯತ್ತ ಸಭಿಕರ ಗಮನ ಸೆಳೆದರು.

ಸಭೆಯ ಆರಂಭದಲ್ಲಿ ಎಸ್. ಎಫ್. ಐ. ಟೌನ್ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ ಸ್ವಾಗತಿಸಿದರು. ಕೊನೆಯಲ್ಲಿ ಕೆ. ಉತ್ಪಲ ವಂದಿಸಿದರು.

ಬೆಂಗಳೂರು :

ಸಮಿತಿ ರಚನೆ

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲದಲ್ಲಿ ನವೆಂಬರ್ 16 ರಂದು ಎಸ್. ಎಫ್. ಐ. ಸರ್ವ ಸದಸ್ಯರ ಸಭೆ ನಡೆದು ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರಾಗಿ ಆರ್. ಹನುಮಯ್ಯ, ಉಪಾಧ್ಯಕ್ಷರಾಗಿ ಪ್ರಕಾಶ್ ಆರಾಧ್ಯ, ಕಾರ್ಯದರ್ಶಿಯಾಗಿ ಸಿ. ಎನ್. ಅನಂತಗೌಡ, ಸಿ ಆರ್. ಹನುಮಂತರಾಯಪ್ಪ ಮತ್ತು ಮಲ್ಲಿಕಾರ್ಜುನಯ್ಯ ಇವರುಗಳು ಸಹಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ.

ಸಭೆಯಲ್ಲಿ ದೊಡ್ಡಬೆಳವಂಗಲದ ರೈತ ಸಂಘದ ಅಧ್ಯಕ್ಷರಾದ ಕಾಂ| ನಾರಾಯಣಚಾರ್ ಭಾಗವಹಿಸಿ ಸಹಕರಿಸಿದರು.

ಹೂವಿನ ಹಡಗಲಿ :

ಸಮಿತಿ ಪುನರ್ರಚನೆ

ಇಲ್ಲಿನ ಎಸ್. ಎಫ್. ಐ. ಘಟಕವು ನವೆಂಬರ್ 19 ರಂದು ಸಭೆ ಸೇರಿ ಕಾರ್ಯಕಾರಿ ಸಮಿತಿಯನ್ನು ಪುನರ್ರಚಿಸಿತು.

ಅಧ್ಯಕ್ಷರಾಗಿ ಎನ್. ಮೆಹಬೂಬ್, ಉಪಾಧ್ಯಕ್ಷರಾಗಿ ಎಚ್. ಬಸಪ್ಪ, ಕಾರ್ಯದರ್ಶಿಯಾಗಿ ಎ. ಅನ್ವರ್ ಬಾಷ, ಉಪ ಕಾರ್ಯದರ್ಶಿಗಳಾಗಿ ಪುಂಡಲೀಕರಾವ್ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ 7 ಜನರನ್ನು ಆಯ್ಕೆಮಾಡಲಾಗಿದೆ.

ಗಡಿನಾಡ ಗಾಂಧಿ ಬಂಧನದಲ್ಲಿ

ಗಡಿನಾಡ ಗಾಂಧಿ ಎಂದು ಖ್ಯಾತರಾಗಿರುವ ಖಾನ್ ಅಬ್ದುಲ್ ಗಫಾರ್ ಖಾನ್‌ರನ್ನು ಜಿಯಾ ನೇತೃತ್ವದ ಪಾಕಿಸ್ತಾನದ ಮಿಲಿಟರಿ ಸರಕಾರವು ಬಂಧಿಸಿರುವುದನ್ನು ಸಿ ಪಿ ಐ. (ಎಂ) ಪೊಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ.

ಭಾರತದ ಸ್ವಾತಂತ್ರ್ಯ ಹಾಗೂ ಬ್ರಿಟಿಷ್ ಸಾಮ್ರಾಜ್ಯಶಾಹಿ ಹೋರಾಟದ ತಲೆಮಾರಿನ ಅತಿ ಹಿರಿಯ ವ್ಯಕ್ತಿ ಖಾನ್ ಅಬ್ದುಲ್ ಗಫಾರ್ ಖಾನ್. ಹಿಂದೆ ಬ್ರಿಟಿಷರ ಕಾಲದಲ್ಲೂ ಹಾಗೂ ಅದೇ ತಾನೇ ಉದಯಗೊಂಡ ಪಾಕಿಸ್ತಾನದ ಆಡಳಿತಗಾರರ ಸಮಯದಲ್ಲೂ ದೀರ್ಘಕಾಲ ಬಂಧನ ವಾಸವನ್ನು ಗಫಾರ್ ಖಾನ್ ಅನುಭವಿಸಿದ್ದಾರೆ.

ಖಾನ್ ಅಬ್ದುಲ್ ಗಫಾರ್ ಖಾನ್‌ರ 'ಇತ್ತೀಚಿನ ಅಪರಾಧ'ವೆಂದರೆ ಅಫಘಾನಿಸ್ತಾನದ ವಿರುದ್ಧದ ಅಮೇರಿಕನ್ ಸಾಮ್ರಾಜ್ಯಶಾಹಿಯ ಕೈವಾಡಗಳನ್ನು ಖಂಡಿಸಿದ್ದು. ಹಾಗೂ ಪಖ್ತೂನಿಗಳ ಐಕ್ಯತೆಗಾಗಿ ಶ್ರಮಿಸಿದ್ದು.

ಜಿಯಾವುಲ್ ಹಕ್ ಮಿಲಿಟರಿ ಸರ್ವಾಧಿಕಾರವು ದೇಶದಲ್ಲಿ ಎಲ್ಲಾ ಪ್ರಜಾಪ್ರಭುತ್ವ, ರಾಜಕೀಯ ಚಟುವಟಿಕೆಗಳನ್ನು ನಿಷೇಧಿಸಿದೆ. ಪಾಕಿಸ್ತಾನದ ಪ್ರಜೆಗಳ ಬಹುದಿನಗಳ ಕನಸಾದ ಸಂಸದೀಯ ಪ್ರಜಾಸತ್ತೆಯನ್ನು ಮೂಲೆಗೆ ತಳ್ಳಲಾಗಿದೆ. 'ಇಸ್ಲಾಂ ರಾಜ್ಯ'ದ ಹೆಸರಿನಲ್ಲಿ ಜನತೆಯನ್ನು ಬರ್ಬರವಾಗಿ ಹಿಂಸಿಸಲಾಗುತ್ತಿದೆ.

ಪ್ರಜಾಸತ್ತೆಯ ಪ್ರಬಲ ಬೆಂಬಲಿಗ ಖಾನ್ ಸಾಹೇಬರನ್ನು ಜಿಯಾ ಸರಕಾರ ಬಂಧಿಸಿರುವುದು ಸಹಜವಾಗಿಯೇ ಇದೆ.

ವಯೋವೃದ್ಧ ಖಾನ್ ಸಾಹೇಬರನ್ನು ಬಂಧಿಸಿರುವ ಜಿಯಾ ಸರಕಾರವನ್ನು ತೀವ್ರವಾಗಿ ಖಂಡಿಸುತ್ತಿರುವ ಈ ಸಮಯದಲ್ಲಿ, ಖಾನ್ ಸಾಹೇಬರ ಬಿಡುಗಡೆಗೆ ಭಾರತ ಸರಕಾರ ತೀವ್ರ ಪ್ರಯತ್ನಿಸಬೇಕೆಂದು ಸಿ.ಪಿ.ಐ. (ಎಂ) ಪೊಲಿಟ್ ಬ್ಯೂರೋ ಒತ್ತಾಯಿಸಿದೆ

○

ಉಳ್ಳಾಲ :

ಬೀಡಿ ಕಾರ್ಮಿಕರ ಸಮಾವೇಶ

ದ. ಕ. ಜಿಲ್ಲೆಯ ಉಳ್ಳಾಲ ಗ್ರಾಮದಲ್ಲಿ 7-11-82 ರಂದು ಬೀಡಿ ಕಾರ್ಮಿಕರ ಸಮಾವೇಶ ನಡೆಯಿತು. ಕಾಂ| ಪೂವಪ್ಪ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಕಾಂ| ಗಂಗಾಧರ ಗಟ್ಟಿ ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ ರಾಜ್ಯ ಬೀಡಿ ಫೆಡರೇಶನ್ನಿನ ಅಧ್ಯಕ್ಷ ಕಾಂ| ಕೆ. ಮೂಸಬ್ಬ ಅವರು ಮಾತನಾಡಿ, ಕಂಟ್ರಾಕ್ಟುದಾರರ ಮೋಸದ ವಿರುದ್ಧ ಹಾಗೂ ಮಾಲೀಕರ ಪರವಾದ ಸರಕಾರದ ನೀತಿಯ ವಿರುದ್ಧ ಬಲಿಷ್ಟ ಸಂಘಟನೆಯನ್ನು ಕಟ್ಟಲು ಕರೆ ನೀಡಿದರು. ದ. ಕ. ಜಿಲ್ಲಾ ಬೀಡಿ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿಗಳಾದ ಕಾಂ| ಯು. ಬಿ. ಲೋಕಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಬೀಡಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಕಾಂ| ಆನಂದ, ಕೆ. ನಾರಾಯಣಶೆಟ್ಟಿಯವರು ಮಾತನಾಡಿ ಹೋರಾಟದ ಮೂಲಕ ಮಾತ್ರ ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂದರು.

ಉಳ್ಳಾಲ ಪಂಚಾಯತ್ ಸದಸ್ಯರಾದ ಕಾಂ| ಗಂಗಾಧರ ಶೆಟ್ಟಿಯವರು ಗ್ರಾಮದ ಸಂಘಟನೆಯ ವರದಿಯನ್ನು ಓದಿದರು. ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಕಾಂ| ಯು.ಬಿ ಮಾರಪ್ಪ ಮತ್ತಿತರರು ಭಾಗವಹಿಸಿದ್ದರು. ವರದಿಯನ್ನು ಅಂಗೀಕರಿಸಲಾಯಿತು.

ನಂತರ 25 ಜನರುಳ್ಳ ನೂತನ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಕಾಂ| ಯು. ಭಾಸ್ಕರ್‌ಕಾರ್ಪೆಂಟರ್ ಅವರು ಸಂಚಾಲಕರಾಗಿ ಚುನಾಯಿತರಾದರು. ಕೊನೆಯಲ್ಲಿ ಕಾಂ| ವಿಶ್ವನಾಥ ಬಂಗೇರ ವಂದಿಸಿದರು.

ಕೊನೆಯಲ್ಲಿ ಬೀಡಿ ಕಾರ್ಮಿಕರ ಬೃಹತ್ ಮೆರವಣಿಗೆ, ಬಹಿರಂಗ ಸಭೆ ಜರುಗಿತು.

ಸ್ಟೈಫಂಡರಿ ಪದವೀಧರರಿಗೆ ಡಿ. ವೈ. ಎಫ್. ಐ. ಬೆಂಬಲ

ಕಾಯಂ ಉದ್ಯೋಗಕ್ಕಾಗಿ ಒತ್ತಾಯಿಸಿ, ಸ್ಟೈಫಂಡನ್ನು ರೂ. 500ಕ್ಕೇರಿಸುವಂತೆ ಒತ್ತಾಯಿಸಿ 8-11-82 ರಂದು ಹೊಸಪೇಟೆ ತಾಲ್ಲೂಕು ಕಚೇರಿ ಆವರಣದಲ್ಲಿ ಸ್ಟೈಫಂಡರಿ ಪದವೀಧರರು ಧರಣಿ ಕುಳಿತಿದ್ದರು. ಡಿ.ವೈ ಎಫ್. ಐ. ಹೊಸಪೇಟೆ ಘಟಕವು ಸ್ಟೈಫಂಡರಿ ಪದವೀಧರರ ಹೋರಾಟವನ್ನು ಬೆಂಬಲಿಸಿತ್ತು.

ನವೆಂಬರ್ 19 ರಂದು ಸ್ಟೈಫಂಡರಿ ಪದವೀಧರರು ಜಿಲ್ಲೆ-ತಾಲ್ಲೂಕು ಕಚೇರಿಗಳ ಎದುರು ನಡೆಸಿದ ಮತಪ್ರದರ್ಶನವನ್ನು ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿಯು ಬೆಂಬಲಿಸಿತ್ತು. ರಾಜ್ಯದ ಸುಮಾರು 14 ಸಾವಿರ ಸ್ಟೈಫಂಡರಿ ಪದವೀಧರರು ಸರಕಾರದ ವಿವಿಧ ಇಲಾಖೆಗಳಲ್ಲಿ ಕಾಯಂ ಕೆಲಸವಿಲ್ಲದೆ ಕಡಿಮೆ ವೇತನಕ್ಕೆ ದುಡಿಯುತ್ತಿದ್ದು, ಇವರ ಬೇಡಿಕೆಗಳನ್ನು ಬೆಂಬಲಿಸಿ ಡಿ. ವೈ. ಎಫ್. ಐ. ಹೋರಾಟ ನಡೆಸಿದ್ದನ್ನು ಇಲ್ಲಿ ನೆನೆಯಬಹುದು.

○

ಬೆಂಗಳೂರು :

ಬಂಧಿತ ಕನಕಪುರ ರೈತರ ಬಿಡುಗಡೆಗೆ ಒತ್ತಾಯಿಸಿ ಮತಪ್ರದರ್ಶನ

ಕನಕಪುರ ತಾಲ್ಲೂಕಿನಲ್ಲಿ ಗ್ರಾನೈಟ್ ಕಲ್ಲನ್ನು ಅಕ್ರಮವಾಗಿ ಸಾಗಿಸುತ್ತಿರುವುದನ್ನು ಪ್ರತಿಭಟಿಸಿದ ಸಹಸ್ರಾರು ರೈತರನ್ನು ಬಂಧಿಸಿ ದೂರ ದೂರ ಜೈಲುಗಳಿಗೆ ಕಳುಸಲಾಗುತ್ತಿದೆ. ರೈತರ ಸಮಸ್ಯೆಯನ್ನು ಬಗೆಹರಿಸುವುದನ್ನು ಬಿಟ್ಟು ಬಂಧಿಸುತ್ತಿರುವುದಷ್ಟೇ ಅಲ್ಲ ಪೋಲೀಸ್ ಪಡೆ ಗ್ರಾಮಗಳಿಗೆ ನುಗ್ಗಿ ಭಯದ ವಾತಾವರಣ ಉಂಟುಮಾಡುತ್ತಿದ್ದಾರೆ.

ಸರಕಾರದ ಕ್ರಮವನ್ನು ಪ್ರತಿಭಟಿಸಿ ಬೆಂಗಳೂರು ಜಿಲ್ಲಾ ರೈತ ಸಂಘದ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಚೇರಿ ಎದರು ಮತಪ್ರದರ್ಶನ ನಡೆಸಿದರು.

ಬಂಧಿತ ರೈತರನ್ನು ಕೂಡಲೇ ಬಿಡುಗಡೆ ಮಾಡಬೇಕು; ರೈತರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು; ಕನಕಪುರ ತಾಲ್ಲೂಕಿನಲ್ಲಿ ಗ್ರಾನೈಟ್ ಕಲ್ಲಿನ ಅಕ್ರಮ ಸಾಗಣೆಯನ್ನು ನಿಲ್ಲಿಸಿ ರೈತರ ನ್ಯಾಯಯುತ ಬೇಡಿಕೆಯನ್ನು ಈಡೇರಿಸಬೇಕು — ಇದು ಮತಪ್ರದರ್ಶನಕಾರರ ಬೇಡಿಕೆಗಳು.

ಕಾಂ| ಪಿ. ಜಗನ್ನಾಥ, ಲಕ್ಷ್ಮಣ್ಣ ಮತ್ತಿತರರು ಮತಪ್ರದರ್ಶನದ ನೇತೃತ್ವವನ್ನು ವಹಿಸಿದ್ದರು.

○

ವಿರಾಜಪೇಟೆ :

ಡಿ. ವೈ. ಎಫ್. ಐ. ಸರ್ವಸದಸ್ಯರ ಸಭೆ

ಡಿ.ವೈ.ಎಫ್.ಐ. ವಿರಾಜಪೇಟೆ ಘಟಕದ ಸರ್ವಸದಸ್ಯರ ಸಭೆ ನವೆಂಬರ್ 12 ರಂದು ನಡೆಯಿತು. ಡಿ. ವೈ. ಎಫ್. ಐ. ರಾಜ್ಯ ಸಮಿತಿ ಸದಸ್ಯರಾದ ಕಾಂ| ಮೋಹನ್ ಕುಮಾರ್ ಹಾಗೂ ತಾಲ್ಲೂಕು ಘಟಕದ ಕಾರ್ಯದರ್ಶಿ ಕಾಂ| ಐ. ಆರ್. ಪ್ರಮೋದ್ ಅವರುಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾಂ| ಸ್ಟ್ಯಾನ್‌ಲಿವಾಸ್ ವಹಿಸಿದ್ದರು.

ಸಭೆಯು ಇತ್ತೀಚೆಗೆ ನಿಧನರಾದ ಕಾಂ| ಬ್ರೆಜ್ನೇವ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿತು. ವಿಶ್ವಕನ್ನಡ ಸಮ್ಮೇಳನದ ಹೆಸರಿನಲ್ಲಿ ರಾಜ್ಯದ ಬೊಕ್ಕಸವನ್ನು ಸೂರೆ ಮಾಡುತ್ತಿರುವುದನ್ನು ಸಭೆ ಖಂಡಿಸಿದೆ.

ವಿರಾಜಪೇಟೆ ನಗರ ಸಮಿತಿಗೆ ನೂತನ ಸಮಿತಿಯೊಂದನ್ನು ರಚಿಸಲಾಗಿದೆ. ಅಧ್ಯಕ್ಷರಾಗಿ ಪಿ. ಜೆ. ಜೋಸ್, ಉಪಾಧ್ಯಕ್ಷರಾಗಿ ಪಿ. ಕೆ. ಅಬ್ದುಲ್ ರಹಮಾನ್, ಕಾರ್ಯದರ್ಶಿಯಾಗಿ ಸ್ಟ್ಯಾನ್‌ಲಿವಾಸ್, ಸಹ ಕಾರ್ಯದರ್ಶಿಯಾಗಿ ಟಿ.ಎಚ್. ಖಾದರ್, ಖಜಾಂಚಿಯಾಗಿ ಎಂ. ಎ. ಇಬ್ರಾಹಿಂರನ್ನು ಒಳಗೊಂಡು 15 ಜನರಿರುವ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಗಿದೆ.

○

ಬರಗಾಲ ಬವಣೆಗೆ ತುತ್ತಾದ ಪಶ್ಚಿಮ ಬಂಗಾಲ

— ಎನ್ಕೆ

ಹೋದ ವರ್ಷಕ್ಕಿಂತಲೂ ಈ ವರ್ಷ ಪಶ್ಚಿಮ ಬಂಗಾಲ ಅತಿ ಗಂಭೀರವಾದ ಬರಗಾಲದ ಪರಿಸ್ಥಿತಿಯನ್ನೆದುರಿಸುತ್ತಿದೆ. ಈ ಹಿಂದೆ ಬರಗಾಲಬಿದ್ದಾಗ ಎಲ್ಲಾ ಜಿಲ್ಲೆಗಳಿಗೂ ಒಂದೇ ತರದ ಪರಿಣಾಮ ಉಂಟಾಗುತ್ತಿಲಿಲ್ಲ. ಹಾಗೆಯೇ ಒರಿಸ್ಸಾ, ಬಿಹಾರಗಳಂಥ ನೆರೆ ಪ್ರಾಂತಗಳಿಗೆ ಕೆಲಸಕ್ಕಾಗಿ ವಲಸೆ ಹೋಗುವ ಸಾಧ್ಯತೆಗಳಿದ್ದವು. ಆದರೆ ಈ ವರ್ಷ ಮಾತ್ರ 24 ಪರಗಣ ಒಂದು ಜಿಲ್ಲೆ ಬಿಟ್ಟು ಉಳಿದ ಜಿಲ್ಲೆಗಳೆಲ್ಲ ಮಳೆ ನೀರು ಕಾಣದಂತಾಗಿದೆ. ಅಷ್ಟೇ ಅಲ್ಲ ಬಿಹಾರ, ಒರಿಸ್ಸಾ ರಾಜ್ಯಗಳೂ ಮಳೆ ಅಭಾವಕ್ಕೆ ತುತ್ತಾಗಿ ತತ್ತರಿಸುತ್ತಿವೆ ಕಾರಣ ಬೇರೆ ಜಿಲ್ಲೆಗಳಿಗಾಗಲಿ, ಪ್ರಾಂತಗಳಿಗಾಗಲೀ ವಲಸೆ ಹೋಗುವ ಪರಿಸ್ಥಿತಿಯೇ ಇಲ್ಲ ಹೀಗಾಗಿ ಗ್ರಾಮಾಂತರ ಪ್ರದೇಶದ 400 ಲಕ್ಷ ಜನ ಸಂಖ್ಯೆ ಬರಗಾಲಕ್ಕೆ ತುತ್ತಾಗಿದ್ದಾರೆ. ಭೂಹೀನ ಕೃಷಿ ಕಾರ್ಮಿಕರು ಅತಿ ಕಠಿಣ ಪರಿಸ್ಥಿತಿಯನ್ನೆದುರಿಸುತ್ತಿದ್ದಾರೆ. ಯಾಕೆಂದರೆ ಅವರಿಗೆ ಕೆಲಸವೇ ಇಲ್ಲದಂತಾಗಿದೆ. ಮಧ್ಯಮ ಮತ್ತು ಸಣ್ಣ ರೈತರಿಗೂ, ಎರಡೂ ಬೆಳೆ ಬೆಳೆಯದ್ದರಿಂದಲ್ಲೂ, ದೊಡ್ಡ ರೈತರ ಭೂಮಿಯಲ್ಲಿ ಕೆಲಸ ಸಿಗದಿರುವುದರಿಂದಲೂ ಹಾನಿಯಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಎಡರಂಗ ಸರಕಾರದ ಅಂದಾಜಿನಂತೆ ಬರಗಾಲದಿಂದ ಉಂಟಾದ ಹಾನಿ ಈ ರೀತಿ ಇದೆ :

ಸರ್ವಸಾಧಾರಣ ಬೆಳೆಯಬೇಕಾದ 39 ಲಕ್ಷ ಬೇಲ್ ನಾರಿನ ಬದಲಾಗಿ ಈ ವರ್ಷ ಬರೀ 21 ಲಕ್ಷ ಬೇಲ್ ಬೆಳೆಯಬಹುದು. ಇದರಿಂದ ರೂ. 57 ಕೋಟಿ ಹಾನಿ. ಮುಂಗಾರಿ ಭತ್ತ 5.75 ಲಕ್ಷದ ಬದಲಾಗಿ 3.11 ಲಕ್ಷ ಟನ್ ಸಿಗಬಹುದು. ಇದರ ನಷ್ಟ ರೂ. 53 ಕೋಟಿ. ಹಿಂಗಾರಿ ಭತ್ತ 50 ಲಕ್ಷ ಟನ್ ಸ್ವಚ್ಛಮಾಡಿದ ಅಕ್ಕಿ ಬದಲಾಗಿ 25ಲಕ್ಷ ಟನ್ ಅಕ್ಕಿ ದೊರೆಯಬಹುದು. ಇದರಿಂದ ರೂ. 500 ಕೋಟಿ ಹಾನಿ. ಇತರ ಮುಂಗಾರಿ ಬೆಳೆಗಳಿಂದಾಗಿ (ಗೋದಿ, ಬಟಾಟೆ ಮುಂತಾದವು) ರೂ. 340 ಕೋಟಿ ಹಾನಿ. ಹೀಗೆ ಒಟ್ಟು ಈ ವರ್ಷ ರೂ. 950 ಕೋಟಿ ಹಾನಿ ತಟ್ಟಬಹುದು.

ಈಗಿನ ಅಂದಾಜಿನಂತೆ ರೂ. 950 ಕೋಟಿ ನಷ್ಟದಲ್ಲಿ ಇದರ ಅರ್ಧ ಹಣ ಅಂದರೆ ರೂ. 475 ಕೋಟಿ ಕೃಷಿ ಕಾರ್ಮಿಕರಿಗೆ, ಚಿಕ್ಕ ರೈತರಿಗೆ ಮೊದಲಾದವರಿಗೆಲ್ಲ ಸಂಬಳದ (ಪಗಾರ) ರೂಪದಲ್ಲಿ ಹಾನಿಯಾಗಿದೆ.

ಮಳೆಯ ಅಭಾವದಿಂದಾಗಿ ನಾರು ಮತ್ತು ಮುಂಗಾರಿ ಬೆಳೆ ಒಣಗುತ್ತಿದ್ದು, ಹಿಂಗಾರಿಗಾಗಿ ತಯಾರಿ ಮಾಡುವ ಸಾಧ್ಯತೆ ಇಲ್ಲದಾದಾಗ ಬರಗಾಲ ಪರಿಸ್ಥಿತಿ ಅಭ್ಯಾಸಮಾಡಿ ಪರಿಹಾರ ಸೂಚಿಸುವ ಸಲುವಾಗಿ ಅಭ್ಯಾಸ ತಜ್ಞರನ್ನು ಕಳುಹಿಸಬೇಕೆಂದು ಪ. ಬಂಗಾಲ ಸರಕಾರ ಕೇಂದ್ರವನ್ನು ಕೇಳಿಕೊಂಡಾಗ, ಆಗಿನ ಅಂದರೆ ಜೂನ್–ಜುಲೈ ತಿಂಗಳ ಪರಿಸ್ಥಿತಿಯನ್ನು ಅಭ್ಯಾಸಮಾಡಿ ಶಿಫಾರಸು ಮಾಡಿದ ಪರಿಣಾಮವಾಗಿ ರಾಜ್ಯ ಸರಕಾರ ರೂ. 74,18 ಕೋಟಿ ಧನ ಸಹಾಯಬೇಕೆಂದು ಕೇಳಿದ್ದರೂ ಕೇಂದ್ರ ಸರಕಾರ ರೂ. 24,77 ಕೋಟಿ ಮಾತ್ರ ಮಂಜೂರು ಮಾಡಿತ್ತು. ಆದರೆ ಮೊದಲಿನ ಬೆಳೆಯಂತೆಯೇ ಎರಡನೇ ಬೆಳೆಯೂ ಸಂಪೂರ್ಣ ಇಲ್ಲದಂತಾಗಿರುವಾಗ, ಮಾಡಲು ಕೆಲಸ, ಉಣಲು ಆಹಾರ, ಕುಡಿಯಲು ನೀರೂ ಸಿಗದಿರುವಾಗ, ಇವುಗಳನ್ನೊದಗಿಸಲು ಎಡರಂಗ ಸರಕಾರ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದರೂ ಕೇಂದ್ರ ಸರಕಾರದಿಂದ ಸರಿಯಾಗಿ ಸಹಾಯ ನೀಡಲ್ಪಡದಿರುವುದರಿಂದ ಗಂಭೀರ ಪರಿಸ್ಥಿತಿಯನ್ನೆದುರಿಸಬೇಕಾಗಿದೆ.

ಕೆಲಸ ಒದಗಿಸುವ ಕಾಮಗಾರಿಗಳ ಸಲುವಾಗಿ (ನೀರಾವರಿ, ಬಂಡಿಂಗ, ಅರಣ್ಯ, ಮೊದಲಾದವು) ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆ, ಮಕ್ಕಳಿಗೆ ಆಹಾರ, ಬಟ್ಟೆ, ದನಗಳಿಗೆ ಆಹಾರ, ಔಷದೋಪಚಾರ ಮುಂತಾದವುಗಳ ಸಲುವಾಗಿಯೂ ಇತರ ವ್ಯವಸ್ಥೆಗಳಿಗೂ ಒಟ್ಟು ರೂ. 205 ಕೊಟಿ ಸಹಾಯ ಧನ ಕೇಳಲಾಗಿದೆ.

ಆದರೆ ಕೇಂದ್ರ ಸರಕಾರ ಸರಿಯಾಗಿ ಸಹಾಯ ಮಾಡುತ್ತಿಲ್ಲ. ಸಾಕಷ್ಟು ಆಹಾರ ಧಾನ್ಯ ಕೇಂದ್ರ ಗೋಡಾಮುಗಳಲ್ಲಿದೆಂದು ಜಂಭ ಕೊಚ್ಚಿಕೊಳ್ಳುತ್ತಿರುವ ಕೇಂದ್ರ ಸರಕಾರ ಪ. ಬಂಗಾಲ ಜನರಿಗೆ ಪ್ರತಿ ತಿಂಗಳು ಬೇಕಾಗಿರುವ 3-75 ಮೆಟ್ರಿಕ್ ಟನ್ ಧಾನ್ಯದ ಬದಲಾಗಿ ಬರೀ 2.25 ಟನ್ ಧಾನ್ಯಕೊಡಮಾಡಿದೆ. ಇದರಿಂದಲೇ 35 ಸಾವಿರ ಟನ್ ಧಾನ್ಯ ಹಿಟ್ಟಿನ ಗಿರಣಿಗಳಿಗೆ ಒದಗಿಸಬೇಕಾಗಿದೆ. ರಾಜ್ಯಕ್ಕೆ ಕೊಡಮಾಡಿರುವ ಅಸಮರ್ಪಕ ಕೊಡುಗೆಯನ್ನು ಕೂಡ ಆಹಾರ ಕಾರ್ಪೊರೇಶನ್ ರಾಜ್ಯದ ಬೇರೆ ಬೇರೆ ಪ್ರದೇಶಗಳಿಗೆ ಸರಿಯಾಗಿ ಒದಿಗಿಸುತ್ತಿಲ್ಲ. ಈ ಕಾರಣದಿಂದಾಗಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ರೇಶನ್ ಅಂಗಡಿಗಳು ಖಾಲಿ ಬಿದ್ದಿವೆ. ಒತ್ತಾಯದ ಪಡಿತರ ಪದ್ಧತಿಗೊಳಗಾದ ಕಲ್ಕತ್ತ ನಗರದಲ್ಲಿ ಕೂಡ ಗೋಧಿ-ಅಕ್ಕಿ ಒಧಗಿಸುವುದರಲ್ಲಿ ಆಹಾರ ಕಾರ್ಪೊರೇಶನ್ ಸೋತಿದೆ.

ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮಕ್ಕನುಸಾರವಾಗಿ ಕೂಲಿಯನ್ನು ಹಣದ ರೂಪದಲ್ಲಿ ಕೊಡದೆ ಕಾಳಿನ ರೂಪದಲ್ಲಿ ಕೊಡಬೇಕಾಗಿದೆ. ಬರಗಾಲ ಪರಿಸ್ಥಿತಿಯಲ್ಲಿ ಬಡವರಿಗೆ ಈ ಪದ್ಧತಿ ಬಹಳ ಅನುಕೂಲ. ಕೂಲಿಗಾಗಿ ಕಾಳು ಕಾರ್ಯಕ್ರಮಕ್ಕೆ ಕೇಂದ್ರ ಸರಕಾರ ಧಾನ್ಯ ಒದಗಿಸುತ್ತಿಲ್ಲವೆಂದು ಎಡರಂಗದ ಪ. ಬಂಗಾಲ ಸರಕಾರ ಮೊದಲಿನಿಂದಲೂ ಆರೋಪ ಹೊರಿಸುತ್ತಲೇ ಬಂದಿತ್ತು. ಈಗ ಪ್ರತಿ ತಿಂಗಳೂ 35 ಸಾವಿರ ಟನ್ ಆಹಾರ ಧಾನ್ಯ ಈ ಕಾರ್ಯಕ್ರಮಕ್ಕಾಗಿ ಬೇಕಾಗಿದ್ದರೂ ಕೇಂದ್ರ ಸರಕಾರದಿಂದ ಸಹಾಯ ಹಸ್ತ ಮುಂದೆ ಬಾರದಿರುವುದರಿಂದ ಸ್ಥಳೀಯ ಅಂಗಡಿಗಳಲ್ಲಿ ವ್ಯಾಪಾರಸ್ಥರು ಸಾದಾ ಅಕ್ಕಿಯ ಬೆಲೆಯನ್ನು

(7ನೇ ಪುಟ ನೋಡಿ)

ಕಾಂಗ್ರೆಸ್ (ಐ) ನಲ್ಲಿ ಭಿನ್ನಮತ

(4ನೇ ಪುಟದಿಂದ)

ತಿದ್ದುಪಡಿ ಮಾಡಿಕೊಳ್ಳಬೇಕಾದುದನ್ನು ಮನಗಂಡಿರುವುದೂ ಅಗತ್ಯವಾಗಿ ಗಮನಿಸಬೇಕಾದ ವಿಷಯ. ಹರಿಯಾಣದ ರಾಜ್ಯಪಾಲರ ಕ್ರಮದ ವಿರುದ್ಧ ಚಳುವಳಿ ನಡೆದಾಗಲೂ ಸಿ. ಪಿ. ಐ. ಮುಂದಾಳುಗಳು ಐಕ್ಯ ಕಾರ್ಯಾಚರಣೆಯಿಂದ ದೂರವೇ ಇದ್ದರು. ಆದರೆ ಇದೇ ನಿಲುವನ್ನು ಮುಂದುವರಿಸಿದರೆ ತಾವು ಪ್ರಜಾಪ್ರಭುತ್ವವಾದಿ ಜನತೆಯಿಂದ ಸಂಪೂರ್ಣವಾಗಿ ದೂರವಾಗುತ್ತೇವೆಂಬುದನ್ನು ಅವರು ತಿಳಿದುಕೊಂಡರು. ಹಾಗಾಗಿ ಹರಿಯಾಣ ಚಳುವಳಿಯ ಅಂತಿಮ ಹಂತದಲ್ಲೂ, ರಾಷ್ಟ್ರಪತಿ ಚುನಾವಣೆ ಮತ್ತು ಆ ಬಳಿಕ ನಡೆದ ಎಲ್ಲ ಕಾರ್ಯಾಚರಣೆಗಳಲ್ಲೂ ಅವರು ಇತರ ವಿರೋಧ ಪಕ್ಷಗಳ ಜೊತೆ ಸೇರಿಕೊಳ್ಳಬೇಕಾಯಿತು.

ಆದರೆ ಇದು ಸಿ.ಪಿ.ಐ.ನ ಸಾಮಾನ್ಯ ಸದಸ್ಯರ ನಡುವೆ ವಿವಾದಕ್ಕೆ ಎಡೆಮಾಡಿಕೊಟ್ಟಿರುವಂತಿದೆ—ಮತ್ತು ಮುಖಂಡರ ಮಧ್ಯೆಯೂ ಇದು ಪ್ರತಿಫಲಿತವಾಗಿದೆ. ಕೆಲ ಕಾಲದ ಹಿಂದೆ ನಡೆದ ಸಿ.ಪಿ.ಐ. ರಾಷ್ಟ್ರೀಯ ಮಂಡಳಿಯ ಸಭೆಯಲ್ಲಿ ಐಕ್ಯ ಕಾರ್ಯಾಚರಣೆಗಳಲ್ಲಿ ಸಿ. ಪಿ. ಐ. ಸೇರಿಕೊಂಡದ್ದು ಸರಿಯೇ ತಪ್ಪೇ ಎಂಬ ಕುರಿತು ಗಂಭೀರವಾದ ಚರ್ಚೆಗಳು ನಡೆದಿವೆ. ರಾಷ್ಟ್ರೀಯ ಮಂಡಳಿ ಕೊನೆಗೂ ತನ್ನ ಮುಖಂಡರು ಅಂಗೀಕರಿಸಿದ್ದ ನಿಲುವೆಯನ್ನು ಒಪ್ಪಿಕೊಂಡರೂ ಸುಮಾರು ಇಪ್ಪತ್ತು ಜನ ಸದಸ್ಯರು ಅದರ ವಿರುದ್ಧ ಮತ ಚಲಾಯಿಸಿದ್ದರೆಂಬುದನ್ನೂ ಗಮನಿಸಬೇಕು.

ಎಡ ಮತ್ತು ಪ್ರಜಾ ಸತ್ತಾತ್ಮಕ ರಂಗಕ್ಕೆ ಪೂರಕವಾಗಿ ಮತ್ತು ಅದನ್ನು ಬಲಪಡಿಸುವ ಉದ್ದೇಶದಿಂದ 'ವಿಶಾಲ ತಳಹದಿಯ ಹೋರಾಟದ ವೇದಿಕೆ' ಯೊಂದನ್ನು ನಿರ್ಮಿಸಬೇಕೆಂದು ನಮ್ಮ ಪಕ್ಷದ ಜಲಂಧರ್ ಅಧಿವೇಶನ ನೀಡಿದ್ದ ಘೋಷಣೆಯನ್ನು ಸಿ.ಪಿ.ಐ. ಮೊದಲಿನಿಂದಲೂ ಒಪ್ಪಿಕೊಂಡಿರಲಿಲ್ಲ. ತಾವು ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ನಿರ್ಮಾಣಕ್ಕೆ ಬದ್ಧರೆಂದೂ 'ವಿಶಾಲ ತಳಹದಿಯ ರಂಗದ' ಮಾತನ್ನು ಸೇರಿಸುವ ಮೂಲಕ ಸಿ.ಪಿ.ಐ. (ಎಂ) ಈ ಘೋಷಣೆಯನ್ನು ಪೇಲವಗೊಳಿಸುತ್ತಿದೆಯೆಂದೂ, 'ವಿಶಾಲ ತಳಹದಿಯರಂಗ' ವೆಂದರೆ 'ಎಲ್ಲಾ ವಿರೋಧ ಪಕ್ಷಗಳ ಐಕ್ಯ'ವೆಂಬ ತಪ್ಪು ಸಿದ್ಧಾಂತದ ಇನ್ನೊಂದು ರೂಪವೆಂದೂ ಸಿ.ಪಿ.ಐ.ನ ಅಭಿಮತ.

ತಾವು ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ನಿರ್ಮಾಣಕ್ಕೆ ಬದ್ಧರೆಂದು ಸಿ. ಪಿ. ಐ. ಮುಂದಾಳುಗಳು ಹೇಳಿಕೊಳ್ಳುತ್ತಿದ್ದಾರೆ ನಿಜ, ಆದರೆ ಅವರ ಪಾಲಿಗೆ ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯವೆಂದರೆ ಬಿ.ಜೆ.ಪಿ., ಅಕಾಲಿ ಮತ್ತಿತರರನ್ನು ಹೊರತುಪಡಿಸಿ ಉಳಿದ ಎಲ್ಲಾ ವಿರೋಧ ಪಕ್ಷಗಳ ಚುನಾವಣಾ ಒಪ್ಪಂದ ಮಾತ್ರ. ಈ ರಂಗದೊಳಗೆ ಕೆಲವೊಮ್ಮೆ ಸಿ.ಪಿ.ಐ. (ಎಂ)ನ ರಾಜ್ಯ, ಜಿಲ್ಲಾ ಅಥವಾ ಸ್ಥಳೀಯ ಘಟಕಗಳು ಸೇರಿಕೊಂಡರೂ ಸಿ. ಪಿ. ಐ. ನವರಿಗೆ ಪ್ರಚಾರಕ್ಕೆ ಅಷ್ಟೇ ಸಾಕಾಗುತ್ತದೆ. ಕರ್ನಾಟಕದಲ್ಲಿ ಎರಡೂ ಪಕ್ಷಗಳ ರಾಜ್ಯ ಸಮಿತಿಗಳು ಹೊರಡಿಸಿದ್ದ ಜಂಟಿ ಹೇಳಿಕೆಯಲ್ಲಿ ಇದು ವ್ಯಕ್ತವಾಗಿದೆ.

ಪಶ್ಚಿಮ ಬಂಗಾಳದಲ್ಲಿ ಎಡರಂಗವು, ಚಾರಿತ್ರಿಕ ವಿಜಯಗಳಿಸಿ, ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗವು ಅಮೋಘ ಸಾಧನೆಯೊಂದನ್ನು ಸಾಧಿಸಿದ ಕೇವಲ ಹದಿನೈದು ದಿನಗಳ ಬಳಿಕ ಈ ಜಂಟಿ ಹೇಳಿಕೆಯನ್ನು ಹೊರಡಿಸಲಾಗಿತ್ತಾದರೂ ಅದು ಸಿ.ಪಿ.ಐ. (ಎಂ)ನ ನೇತೃತ್ವದಲ್ಲಿ ಗಳಿಸಲಾಗಿದ್ದ ಈ ಸಾಧನೆಯನ್ನು ಶ್ಲಾಘಿಸುವ ಒಂದು ಶಬ್ದವನ್ನೂ ಒಳಗೊಂಡಿರಲಿಲ್ಲ. ಅದರ ಬದಲು ಕರ್ನಾಟಕ ವಿಧಾನ ಮಂಡಳದಲ್ಲಿ ವಿರೋಧ ಪಕ್ಷಗಳು ಒಂದು ಸಂಯುಕ್ತ ಘಟಕವಾಗಿ ಕಾರ್ಯಾಚರಣೆ ನಡೆಸುತ್ತಿದ್ದ ವಿಧಾನವನ್ನೇ ವಿಧಾನ ಮಂಡಳದೊಳಗೂ ಹೊರಗೂ ಅನುಸರಿಸಬೇಕಾದ ಮಾದರಿಯೆಂದು ತೋರಿಸಿಕೊಡಲಾಗಿತು.

ಬೂರ್ಷ್ವಾ ವಿರೋಧ ಪಕ್ಷಗಳು ಡೋಲಾಯಮಾನ ಪರಿಸ್ಥಿತಿಯಲ್ಲಿವೆಯೆಂದೂ, ಎಡ ಪಕ್ಷಗಳು ಒಂದುಗೂಡಿ ತಾವು ನೈಜ ಬದಲೀ ಶಕ್ತಿಯೆಂಬುದನ್ನು ತೋರಿಸಿಕೊಡಬೇಕೆಂದೂ ಸಿ.ಪಿ.ಐ. ಮುಂದಾಳುಗಳು ನೀಡುತ್ತಿರುವ ಬಹಿರಂಗ ಹೇಳಿಕೆಗಳ ಹಿನ್ನೆಲೆಯಲ್ಲಿ ಇದನ್ನು ನೋಡಬೇಕಾಗಿದೆ. ಎಡ ವಿರೋಧ ಪಕ್ಷಗಳು ಬಲ ವಿರೋಧ ಪಕ್ಷಗಳಿಗಿಂತ ಬೇರೆಯೆನ್ನುವುದನ್ನು ತೋರ್ಪಡಿಸುವುದರ ಜೊತೆಗೇ ಕಾಂಗ್ರೆಸ್ (ಐ) ಪಕ್ಷವನ್ನು ಇತರರಿಂದ ಪ್ರತ್ಯೇಕಗೊಳಿಸಿ ಸೋಲಿಸಬಹುದಾದಂತಹ ಚುನಾವಣಾ ತಂತ್ರಗಳನ್ನು ಕೈಬಿಟ್ಟು, ಎಲ್ಲಾ ಎಡ ಪಕ್ಷಗಳೂ ಎಲ್ಲಾ ಚುನಾವಣೆಗಳಲ್ಲೂ ಅತಿ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳನ್ನು ನಿಲ್ಲಿಸಬೇಕೆಂಬುದೇ ಸಿ.ಪಿ.ಐ.ನ ಧೋರಣೆ.

ಪಶ್ಚಿಮ ಬಂಗಾಳದ ವಿದ್ಯಮಾನಗಳು :

ಇತ್ತೀಚೆಗೆ ಪ. ಬಂಗಾಳದಲ್ಲಿ ನಡೆದ ಕೆಲವು ವಿದ್ಯಮಾನಗಳು ಎಡರಂಗವನ್ನೂ ಸರ್ಕಾರವನ್ನೂ ತೀರಾ ಇಕ್ಕಟ್ಟಿನ ಪರಿಸ್ಥಿತಿಯೊಂದಕ್ಕೆ ತಳ್ಳಿವೆ. ಇದು ಅಜಾಗರೂಕತನದ ವಿರುದ್ಧ ನಮಗೆ ನೀಡಲಾದ ಸಕಾಲಿಕ ಎಚ್ಚರಿಕೆಯೆಂದೇ ತಿಳಿಯಬೇಕು. ಪ. ಬಂಗಾಳದ ಎಡರಂಗದಲ್ಲಿ ಉಂಟಾಗಿದ್ದ ಬಿರುಕನ್ನು ಇದೀಗ ಸರಿಪಡಿಸಲಾಗಿದೆ. ಒಂದು ನಿರ್ದಿಷ್ಟ ರಂಗದಲ್ಲಿರುವ ಘಟಕ ಪಕ್ಷಗಳು ತಮ್ಮ ಸ್ವರೂಪದಲ್ಲಿ ಎಡ ಪಕ್ಷಗಳಾಗಿವೆಯೆಂದ ಮಾತ್ರಕ್ಕೆ ಈ ರಂಗವು ಆಂತರಿಕ ತೊಂದರೆಗಳಿಂದ ವಿಮುಕ್ತವಾಗಿದೆಯೆನ್ನಲಾಗದು ಎನ್ನುವುದನ್ನು ಈ ಘಟನೆ ತೋರಿಸಿಕೊಟ್ಟಿದೆ.

ಎಡ ಪಕ್ಷಗಳೆನ್ನಲಾದ ಅನೇಕ ಪಕ್ಷಗಳು ಮೂಲತಃ ತಮ್ಮ ವರ್ಗಗುಣ ಮತ್ತು ಸೈದ್ಧಾಂತಿಕ ಸ್ವರೂಪದಲ್ಲಿ ಪುಟ್ಟ ಬಂಡವಾಳಶಾಹಿ ಪಕ್ಷಗಳೇ ಆಗಿವೆ. ಅವು ತಮ್ಮ ವರ್ಗಕ್ಕೆ ಸಹಜವಾದ ಇತಿಮಿತಿ ಮತ್ತು ದೌರ್ಬಲ್ಯಗಳಿಗೆ ಪಕ್ಕಾಗುವ ಎಲ್ಲ ಸಾಧ್ಯತೆಗಳೂ ಇವೆ. ಹಾಗಾಗಿ ಐದು ವರ್ಷಗಳ ಹಿಂದೆ ಈ ಪಕ್ಷಗಳಿಗೆ ನೀಡಲಾಗಿದ್ದ ಕೆಲವೊಂದು ಖಾತೆಗಳನ್ನು ಅವು ತಮ್ಮ ಸ್ವಂತ ಆಸ್ತಿಯೆಂದು ಭಾವಿಸಲಾರಂಭಿಸಿದವು. ಖಾತೆಗಳನ್ನು ಬದಲಾಯಿಸುವುದೆಂದರೆ ಈ ಪಕ್ಷಗಳ ಹಕ್ಕಿನ ಮೇಲೆ ನಡೆಯುವ ಕಾನೂನು ಬಾಹಿರ ಅತಿಕ್ರಮಣವೆಂದೂ ಅವು ತಿಳಿಯಲಾರಂಭಿಸಿದವು

ಎಡರಂಗದ ಕೆಲವು ಘಟಕ ಪಕ್ಷಗಳ ಪಾಲಿಗೆ 'ಸರ್ವಾನುಮತ'ವೆಂದರೆ ಎಡ ರಂಗದ ಅಥವಾ ರಾಜ್ಯದ ಜನತೆಯ ಹಿತಾಸಕ್ತಿಗಳನ್ನು ಬಲಿಕೊಟ್ಟಾದರೂ ರಂಗದ ಯಾವುದೇ ಒಂದು ಘಟಕ ಪಕ್ಷವು ತನ್ನ ಸ್ವಾರ್ಥಕ್ಕಾಗಿ ಯಾವುದಾದರೂ ಪ್ರಾಮಾಣಿಕ ಮತ್ತು ಅವಶ್ಯಕ ಉಪಕ್ರಮವನ್ನು 'ವೀಟೋ'ಮಾಡುವ ಹಕ್ಕು ಎಂಬ ಅರ್ಥವಿರುವಂತಿದೆ. ಎಡ ರಂಗದ ಪ್ರಧಾನ ಘಟಕ ಪಕ್ಷವಾಗಿರುವ ಸಿ. ಪಿ. ಐ. (ಎಂ) ರಾಜಕೀಯ ಹತ್ಯಾಕಾಂಡ ನಡೆಸುತ್ತಿದೆಯೆಂಬುದಾಗಿ ಕಾಂಗ್ರೆಸ್(ಐ) ಮತ್ತಿತರ ಎಡರಂಗದ ಶತ್ರುಗಳಾಗಿರುವ ಪಕ್ಷಗಳು ಹೇಳುತ್ತಿರುವ ಸುಳ್ಳು ಆರೋಪವನ್ನೇ ಎಡ ರಂಗದ ಒಂದು ಘಟಕ ಪಕ್ಷವಾದರೂ ತಾನೂ ಹೇಳಲಾರಂಭಿಸಿದೆ. ಇದು ಎಡರಂಗದ ಐಕ್ಯತೆಯನ್ನು ಬಲಪಡಿಸಲು ಸಹಾಯಕವಾಗಲಾರದೆಂದು ಬೇರೆ ಹೇಳಬೇಕಾಗಿಲ್ಲ.

ಎಡರಂಗವನ್ನು ಇನ್ನೇನು ಮುರಿದು ಬೀಳಲಿದೆ ಎನ್ನುವಷ್ಟು ಬಿಕ್ಕಟ್ಟಿನ ಪರಿಸ್ಥಿತಿಗೆ ಕೊಂಡೊಯ್ದಿದ್ದ ಪಕ್ಷಗಳೇ ಈ ರಂಗದೊಳಗೆ ಸಿ. ಪಿ. ಐ. ಯನ್ನು ಸೇರಿಸಿ ಅದನ್ನು ವಿಸ್ತರಿಸುವ ಸಲಹೆಯನ್ನೂ ವಿರೋಧಿಸಿದ್ದವು. ಅವುಗಳ ಈ ವರ್ತನೆ ಇನ್ನು ಮುಂದೆಯೂ ಅನೇಕ ಸಮಸ್ಯೆಗಳನ್ನು ಉಂಟುಮಾಡಬಲ್ಲುದು. ಎಡರಂಗವನ್ನು ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯ ಸಾಧನವಾಗಿ ಬೆಳೆಸಿಕೊಳ್ಳುವುದರ ಅಗತ್ಯತೆಯ ಬಗ್ಗೆ ಎಡ ರಂಗದ ಮುಖಂಡನಾಗಿರುವ ಸಿ.ಪಿ.ಐ. (ಎಂ) ದೃಢವಾದ ನಿಲುವೆಯನ್ನು ಅಂಗೀಕರಿಸಿದರೆ ಮಾತ್ರ ಇಂತಹ ಸಮಸ್ಯೆಗಳನ್ನು ತಡೆಯಲು ಸಾಧ್ಯ. ಅದೇ ವೇಳೆಗೆ ರಂಗದ ಒಕ್ಕಟ್ಟನ್ನು ಕಾಪಾಡಿಕೊಳ್ಳುವ ಸಲುವಾಗಿ ಅದರ ಇತರ ಪಕ್ಷಗಳೊಂದಿಗೆ ಅಗತ್ಯವಿದ್ದಷ್ಟು ಹೊಂದಾಣಿಕೆಯನ್ನೂ ಮಾಡಿಕೊಳ್ಳಬೇಕು.

ತುರ್ತಾಗಿ ನೆರವೇರಬೇಕಾದ ಕರ್ತವ್ಯಗಳು :

ಇಂತಹ ಪರಿಸ್ಥಿತಿಯಲ್ಲಿ ನಮ್ಮ ಪಕ್ಷವು ಹಲವಾರು ಕೆಲಸಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿದೆ. ಅಕ್ಟೋಬರ್ 4ರ 'ಶಾಂತಿ ಯಾತ್ರೆ'ಯ ಯಶಸ್ವಿಗಾಗಿ ಅದು ಶ್ರಮಿಸಬೇಕಾಗಿದೆ (ಇದು ಈಗಾಗಲೇ ನೆರವೇರಿದೆ. ಅ೦:) ಪತ್ರಿಕೆಗಳ ಕತ್ತು ಹಿಸುಕುವಂತಹ ಬಿಹಾರ್ ಪತ್ರಿಕಾ ಶಾಸನದ ವಿರುದ್ಧ ನಡೆಯುತ್ತಿರುವ ಚಳುವಳಿಯನ್ನು ಇನ್ನಷ್ಟು ಬಲಗೊಳಿಸಬೇಕು. ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ನಡೆಯುವ ಸರ್ವಾಧಿಕಾರಿ ಸ್ವರೂಪದ ಪ್ರತಿಯೊಂದು ಆಕ್ರಮಣದ ವಿರುದ್ಧವೂ ಪ್ರತಿಭಟನೆಯನ್ನು ಸಂಘಟಿಸಬೇಕು. ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸುವ ಸಲುವಾಗಿ ವಿಭಜಕ ಶಕ್ತಿಗಳ ವಿರುದ್ಧ ಅವಿರತ ಹೋರಾಟ ನಡೆಸಬೇಕು.

ಕ್ಷಾಮಪೀಡಿತ ಮತ್ತು ಪ್ರವಾಹಕ್ಕೀಡಾದ ಪ್ರದೇಶಗಳ ಜನರಿಗೆ ತಕ್ಷಣ ಸೂಕ್ತ ಪರಿಹಾರ ನೀಡುವಂತೆ, ಕೃಷಿ ಕಾರ್ಮಿಕರು ಮತ್ತು ಹರಿಜನರಿಗೆ ರಕ್ಷಣೆ ನೀಡುವಂತೆ ಹಾಗೂ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಕೊಡುವ ಸಲುವಾಗಿ ನಮ್ಮ ಪಕ್ಷ ಹೋರಾಡಬೇಕು. ರಾಷ್ಟ್ರೀಯ ಹೋರಾಟ ಸಮಿತಿಯ ಎಲ್ಲಾ ಕಾರ್ಯಕ್ರಮಗಳಿಗೆ ಜನತೆಯ ಬೆಂಬಲವನ್ನು ದೊರಕಿಸಬೇಕು ಮತ್ತು ಬೆಳೆಯುತ್ತಿರುವ ಮಹಿಳಾ ಚಳುವಳಿಗೆ ನಮ್ಮ ಪಕ್ಷವು ಎಲ್ಲಾ ಬೆಂಬಲ ಹಾಗೂ ಸಹಕಾರವನ್ನೂ ನೀಡಬೇಕು.

(ಮುಗಿಯಿತು)

ಬರಗಾಲ ಬವಣೆಗೆ ತುತ್ತಾದ ಪಶ್ಚಿಮ ಬಂಗಾಲ

(6ನೇ ಪುಟದಿಂದ)

ಕೆ.ಜಿ.ಗೆ ರೂ. 4 ರಷ್ಟು ಹೆಚ್ಚಿಸಿದ್ದಾರೆ. ಕೇಂದ್ರ ಸರಕಾರ ಸಾಕಷ್ಟು ಆಹಾರ ಧಾನ್ಯ ಒದಗಿಸದಿದ್ದರೆ, ಮಾರ್ಕೆಟಿನಲ್ಲಿ ಅತ್ಯಾವಶ್ಯಕ ವಸ್ತುಗಳ ಬೆಲೆ ಇನ್ನೂ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ.

ರಾಜ್ಯಗಳು ನೆರೆಹಾವಳಿ–ಬರಗಾಲಗಳಂಥ ಗಂಡಾಂತರ ಪರಿಸ್ಥಿಗಳನ್ನೆದುರಿಸುತ್ತಿರುವಾಗ ಕೇಂದ್ರ ಸರಕಾರ ರಾಜ್ಯ ಸರಕಾರಗಳ ಅತ್ಯಾವಶ್ಯಕ ಅವಶ್ಯಕತೆಗಳನ್ನು ಪೂರೈಸಲು ಮುಂದೆ ಬರುವುದಿಲ್ಲ. ಆದರೆ ರಾಜ್ಯಗಳಲ್ಲಿ ಬೆಳೆಯುವ ವಸ್ತುಗಳನ್ನು ವಿದೇಶಕ್ಕೆ ಕಳುಹಿಸಿ ಅದರ ಲಾಭವನ್ನು ಕೇಂದ್ರ ಸರಕಾರವೇ ಪೂರ್ಣ ಬಳಸುತ್ತಿದ್ದು ರಾಜ್ಯ ಸರಕಾರಗಳಿಗೆ ತಮ್ಮ ಪಾಲುಕೊಡದಿರುವುದರಿಂದಲೇ ರಾಜ್ಯಗಳಿಗೆ ಹೆಚ್ಚು ನ್ಯಾಯ ತ್ತಾಧಿಕಾರಬೇಕೆಂದು ಕೇಳುವುದಕ್ಕೆ ಒಂದು ಕಾರಣವಾಗಿದೆ.

ಪ. ಬಂಗಾಲದಲ್ಲಿ ಸಿ.ಪಿ.ಐ. (ಎಂ) ನೇತೃತ್ವದ ಎಡರಂಗ ಸರಕಾರ ಅಧಿಕಾರದಲ್ಲಿರುವುದರಿಂದ ಕೇಂದ್ರ ಸರಕಾರ ಮಲತಾಯಿ ಧೋರಣೆಯನ್ನನುಸರಿಸುತ್ತಿರುವುದು ಖಂಡನೀಯ. ಪ. ಬಂಗಾಲ ಸರಕಾರ ಈ ಮುಂಚೆ ಕೂಡ ಯೋಜನೆಗಳಿಗಾಗಿ, ಅಭಿವೃದ್ಧಿ ಕೆಲಸಗಳಿಗಾಗಿ ಧನ ಸಹಾಯ ಬೇಡಿದಾಗ ಕೇಂದ್ರ ಸರಕಾರ ಅವುಗಳನ್ನು ನಿರಾಕರಿಸಿತ್ತು. ಕೂಲಿಗಾಗಿ–ಕಾಳು ಕಾರ್ಯಕ್ರಮಕ್ಕೂ ಅಡ್ಡಿ ಉಂಟು ಮಾಡಿತ್ತು. ಕೇಂದ್ರದ ಈ ನೀತಿ ಖಂಡನೀಯ. ದೇಶದಲ್ಲಿರುವ ಎಲ್ಲ ವಿರೋಧ ಪಕ್ಷಗಳೂ, ಪ್ರಜಾಪ್ರಭುತ್ವವಾದಿಗಳೂ ವಿರೋಧ ಪಕ್ಷಗಳ ಆಳ್ವಿಕೆಗೊಳಗಾಗಿರುವ ಮುಖ್ಯವಾಗಿ ಪಶ್ಚಿಮ ಬಂಗಾಲ ಸರಕಾರದ ಕುರಿತು ಕೇಂದ್ರ ಸರಕಾರದ ಧೋರಣೆಯನ್ನು ಖಂಡಿಸಿ, ಅತ್ಯಂತ ಗಂಭೀರ ಪರಿಸ್ಥಿತಿಯನ್ನೆದುರಿಸುತ್ತಿರುವ ಎಡರಂಗ ಸರಕಾರಕ್ಕೆ ಬರಗಾಲ ಪರಿಸ್ಥಿತಿಯನ್ನು ಎದುರಿಸಿ ಜನರಿಗೆ ಎಲ್ಲ ರೀತಿಯ ಸಹಾಯ ಒದಗಿಸುವ ಸಲುವಾಗಿ ಅಪಾರ ಧಾನ್ಯ - ಹಣ ಸಹಾಯ ಕೂಡಲೇ ಒದಗಿಸಬೇಕೆಂದು ಒತ್ತಾಯ ತರುವುದು ಅತ್ಯಗತ್ಯ.

ಕುಶಾಲನಗರ :

ಬಹಿರಂಗ ಸಭೆ

16-11-82 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ರೈತ ಸಂಘದ ಜಂಟಿ ನೇತೃತ್ವದಲ್ಲಿ ಕುಶಾಲನಗರದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ. ಟಿ.ಬಿ.ಸುಬ್ಬಯ್ಯ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕಾಂ. ಎಂ. ಎನ್. ಉಗ್ರಪ್ಪ ಆಗಮಿಸಿದ್ದರು.

ಸಭೆಯಲ್ಲಿ ಸರಕಾರದ ರೈತ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಲಾಯಿತು.

ಸಭೆಯ ಆರಂಭದಲ್ಲಿ ಕಾಂ. ಮಾಧವ ನಂಬಿಯಾರ್ ಸ್ವಾಗತಿಸಿದರು.

O

ಉಪ್ಪಿನಂಗಡಿ :

ಬೀಡಿ ಕಾರ್ಮಿಕರ ಸಭೆ

ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯಲ್ಲಿ 14-11-82 ರಂದು ಬೀಡಿ ಕಾರ್ಮಿಕರ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ. ಎಚ್. ಗಿರಿಜ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬೀಡಿ ಮತ್ತು ಇತರ ಕಾರ್ಮಿಕರ ಸಂಘದ ಸಂಚಾಲಕ ಕಾಂ. ಬಿ. ರಾಮಕೃಷ್ಣ ಉಪಸ್ಥಿತರಿದ್ದರು.

ಆರಂಭದಲ್ಲಿ ಕಾಂ. 'ಜೋಸೆಫ್' ಸ್ವಾಗತಿಸಿದರು. ರಾಮಕೃಷ್ಣ ಅವರು ಮಾತನಾಡಿ, ಬೀಡಿ ಕಾರ್ಮಿಕರು ಸುಲಿಗೆಯ ವಿರುದ್ಧ ಸಂಘಟಿತರಾಗಬೇಕೆಂದು ತಿಳಿಸಿ, ಇತ್ತೀಚೆ ಬೀಡಿ ಫೆಡರೇಶನ್‌ನ ನೇತೃತ್ವದಲ್ಲಿ ಕಾರ್ಮಿಕರು ನಡೆಸಿದ ದೀರ್ಘ ಹೋರಾಟವನ್ನು ವಿವರಿಸಿದರು.

ಕುಣಿಗಲ್ :

ಇಂಟೆಕ್ (ಐ) ನಿಂದ ಸಿ.ಐ.ಟಿ.ಯು.ಗೆ

ತುಮಕೂರು ಜಿಲ್ಲೆಯ ಕುಣಿಗಲ್ ವೃತ್ತ (ಸರ್ಕಲ್)ಕ್ಕೆ ಸೇರಿದ ರೇಷ್ಮೆ ಕೆಲಸಗಾರರ ಸಂಘವು ಇದುವರೆಗೂ ಇಂಟಕ್ (ಐ) ನೇತೃತ್ವದಲ್ಲಿದ್ದು, ಕೆಲಸಗಾರರು ಇದೀಗ ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ. 14-11-82 ರಂದು ಕುಣಿಗಲ್ ತಾಲ್ಲೂಕ್‌ನ ಬಿಳೀ ದೇವಾಲಯ ಗ್ರಾಮದಲ್ಲಿ ಕಾರ್ಮಿಕರ ಸಭೆ ನಡೆದು ಹಿಂದಿನ ಇಂಟಕ್ (ಐ)ನ ನಾಯಕತ್ವವನ್ನು ವಜಾ ಮಾಡಿದರು.

ಸಂಘಕ್ಕೆ ನೂತನ ಪದಾಧಿಕಾರಿಗಳಾಗಿ ಕಾಂ| ಎನ್. ಬಿ ಲಿಂಗದೇವರು ಅಧ್ಯಕ್ಷರಾಗಿ, ಕಾಂ| ಮಹಮ್ಮದ್ ದಸ್ತಗೀರ್ ಮತ್ತು ಬಡೇ ಸಾಹೇಬ್ ಇವರುಗಳು ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಕಾಂ| ಅಂಜಪ್ಪ, ಸಹ ಕಾರ್ಯದರ್ಶಿಯಾಗಿ ಹೊನ್ನಯ್ಯ, ಖಜಾಂಚಿಯಾಗಿ ಕದರ ನರಸಯ್ಯ ಮತ್ತು 11 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

21-11-82 ರಂದು ಹೆಬ್ಬೂರಿನಲ್ಲಿ ರೇಷ್ಮೆ ಫಾರಂ ಕೆಲಸಗಾರರ ಸಭೆ ನಡೆದು, ಕುಣಿಗಲ್, ಬಿಳೀ ದೇವಾಲಯ, ಹೆಬ್ಬೂರು, ಸಂತೇಮಾವತೂರು, ಗುಬ್ಬಿ ಈ ಮುಂತಾದ ಸ್ಥಳಗಳಿಂದ ಸುಮಾರು 200 ಕಾರ್ಮಿಕರು ಆಗಮಿಸಿದ್ದರು.

ಪುತ್ತೂರು :

ದರ್ಕಾಸ್ತುದಾರರ ಹೋರಾಟ

ಗುಂಡೂರಾಯರ ಕಾಡು ಬೆಳೆಸುವ ಯೋಜನೆ ದರ್ಕಾಸ್ತುದಾರ ರೈತನಿಗೆ ದಿಕ್ಕಿಲ್ಲದ ರೀತಿಯಲ್ಲಿ ಮಾಡಿದೆ. 30—40 ವರ್ಷಗಳಿಂದ ಸರಕಾರೀ ಭೂಮಿಯಲ್ಲಿ ನೆಲೆನಿಂತು ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ರೈತನಿಗೆ ಸರಕಾರ ಸಾಗುವಳಿ ಚೀಟಿ ಕೊಡುವ ಬದಲು ಅವರ ಮನವಿಗಳನ್ನು ತಿರಸ್ಕರಿಸಲಾಗುತ್ತಿದೆ. ರೈತನ ಭೂಮಿಯಲ್ಲಿ ಸರಕಾರ ಕಾಡು ಬೆಳೆಸಲು ಹೊರಟಿದೆ.

ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದಲ್ಲಿ ರೈತ ಸಂಘದ ಘಟಕವೊಂದನ್ನು ಸಂಘಟಿಸಲಾಗಿದೆ. ಇಲ್ಲಿ ತಾಲ್ಲೂಕಿನಲ್ಲೇ ದರ್ಕಾಸ್ತು ಸಮಸ್ಯೆ ಇರುವ ಹೆಚ್ಚು ಜನ ಇದ್ದಾರೆ.

7—11—82 ರಂದು ಬಿಳಿನೆಲೆ ಗ್ರಾಮದಲ್ಲಿ ರೈತ ಸಂಘದ ನೇತೃತ್ವದಲ್ಲಿ ಬಹಿರಂಗ ಸಭೆ ನಡೆದು ಸಮಸ್ಯೆಯ ನಿಜ ಸ್ವರೂಪವನ್ನು ವಿವರಿಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ| ಪರಮೇಶ್ವರ ನಂಬೀಶನ್, ಶಂಕರ್, ವಿಲ್ಫ್ರೆಡ್ ಡಿಸೋಜ, ಕಂಬನ್, ಜೋಸೆಫ್ ಮೊದಲಾದವರು ಮಾತನಾಡಿದರು. ಸಭೆಗೆ ಮುನ್ನ ಭಾರೀ ಮೆರವಣಿಗೆ ಹೊರಡಿಸಲಾಗಿತ್ತು.

8-11-82 ರಿಂದ 14-11-82ರ ವರೆಗೆ ಅಲ್ಲಿನ ಗ್ರಾಮ ಪಂಚಾಯತ್ ಎದುರು ಸಾಂಕೇತಿಕ ಸತ್ಯಾಗ್ರಹ ನಡೆಯಿತು. ಪ್ರತಿದಿನ ಹತ್ತು ಹತ್ತು ರೈತರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. 15-11-82 ರಂದು ನೀಡ್ಪಳ್ಳಿ ಗ್ರಾಮ ಪಂಚಾಯತ್ ಎದುರು ಸತ್ಯಾಗ್ರಹ ನಡೆಯಿತು.

ತಾಲ್ಲೂಕು ರೈತ ಸಂಘವು ಸತ್ಯಾಗ್ರಹವನ್ನು ತೀವ್ರಗೊಳಿಸಲು ಸಕಲ ಸನ್ನಾಹ ನಡೆಸಿದೆ. ದರ್ಕಾಸ್ತುದಾರರ ಸಮಸ್ಯೆ ದ. ಕ. ಜಿಲ್ಲೆಯ ಪುತ್ತೂರು, ಸುಳ್ಯ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಅತೀ ಹೆಚ್ಚು ಇದ್ದು ಸಂಘಟಿತ ಹೋರಾಟ ಅತ್ಯವಶ್ಯವಾಗಿದೆ.

○

ಐಕ್ಯ ಹೋರಾಟದಿಂದಲೇ ಪರಿಹಾರ ಸಾಧ್ಯ

(1ನೇ ಪುಟದಿಂದ)

ಜನತಾ ಪಕ್ಷದ ಮುಖಂಡರಾದ ಶ್ರೀ ಲಕ್ಷ್ಮೀನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಎಲ್ಲ ವಿರೋಧ ಪಕ್ಷಗಳ ಪರವಾಗಿ ಹುಬ್ಬಳ್ಳಿಯಲ್ಲಿ ತಾ|| 12 ರಿಂದ 21ರ ವರೆಗೆ ಧರಣಿ ಸತ್ಯಾಗ್ರಹ ನಡೆದು 21 ರಂದು ಹುಬ್ಬಳ್ಳಿ ಬಂದ್ ಯಶಸ್ವಿ ರೀತಿಯಿಂದ ಆಚರಿಸಲಾಯಿತು.

ಬಿಜಾಪುರ, ಜಮಖಂಡಿ ಮೊದಲಾದೆಡೆಗಳಲ್ಲಿ ಸತ್ಯಾಗ್ರಹಗಳು ನಡೆದಿವೆ.

ಜನರೆದುರಿಸುತ್ತಿರುವ ಕೆಲವು ಮುಖ್ಯ ಬೇಡಿಕೆಗಳ ಸಲುವಾಗಿ ಎಲ್ಲ ವಿರೋಧ ಪಕ್ಷಗಳ ಐಕ್ಯ ಕಾರ್ಯಾಚರಣೆ ಪ್ರಾರಂಭವಾಗಿರುವುದು ಸ್ವಾಗತಾರ್ಹ. ಇದನ್ನು ಇನ್ನೂ ಹೆಚ್ಚಿನ ಒಗ್ಗಟ್ಟಿನಿಂದ ಶಿಸ್ತಿನಿಂದ ಮುಂದುವರಿಸಿಕೊಂಡು ಹೋಗುವುದು ಅತ್ಯಗತ್ಯ.

●

ತುಮಕೂರು :

ಕಾಂಗ್ರೆಸ್ ಮುಖಂಡರಿಗೆ ಕಪ್ಪು ಬಾವುಟ ಪ್ರದರ್ಶನ

21-11-82 ರಂದು ಜಿಲ್ಲಾ ಸ್ವೈಲ್ಯಫಂಡರಿ ಪದವೀಧರರು ಸಹಕಾರಿ ಬ್ಯಾಂಕ್ ಶಾಖೆಯ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡಿದ್ದ ಸಚಿವ ವೀರಪ್ಪ ಮೊಯ್ಲಿ, ಲೋಕಸಭಾ ಸದಸ್ಯ ಎಸ್. ಟಿ. ಖಾದ್ರಿ ಮತ್ತು ಕೆ. ಲಕ್ಕಪ್ಪ ಮತ್ತಿತರ ಕಾಂಗ್ರೆಸ್ ಮುಖಂಡರಿಗೆ ಕಪ್ಪು ಬಾವುಟ ಪ್ರದರ್ಶಿಸಿದರು.

ಸ್ವೈಲ್ಯಫಂಡರಿ ಪದವೀಧರರಿಗೆ ಸುಳ್ಳು ಆಶ್ವಾಸನೆಗಳನ್ನು ಕೊಟ್ಟು ವಂಚಿಸುತ್ತಾ ಬಂದಿರುವ ಹಿನ್ನೆಲೆಯಲ್ಲಿ ಸ್ವೈಲ್ಯಫಂಡರಿ ಪದವೀಧರರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಪ್ರದರ್ಶನದ ನಾಯಕತ್ವವನ್ನು ಎಂ. ಆರ್. ನರಸಿಂಹಯ್ಯ, ಕೆ. ಎಸ್. ಕೃಷ್ಣೋಜಿರಾವ್, ಗುರುರಾಜರಾವ್, ಬಿ. ಸಿ ಕೃಷ್ಣಮೂರ್ತಿ, ಟಿ. ಯೋಗೇಂದ್ರ, ಶಿವಣ್ಣ ಮತ್ತಿತರರು ಭಾಗವಹಿಸಿದ್ದರು.

○

ಬೆಂಗಳೂರು :

ಸಿ.ಐ.ಟಿ.ಯು. ನೇತೃತ್ವದಲ್ಲಿ ಧರಣಾ

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ರಾವ್ ಇನ್ಸುಲೇಟರ್‌ನ ಕಾರ್ಮಿಕರು ಸುಮಾರು ಆರು ತಿಂಗಳ ಅವಧಿಯ ಧೀರ್ಘ ಹೋರಾಟವನ್ನು ಬೆಂಬಲಿಸಿ ಸಿ.ಐ.ಟಿ.ಯು. ನೇತೃತ್ವದ ಕಾರ್ಮಿಕ ಸಂಘಗಳು ನವೆಂಬರ್ 26 ರಿಂದ ಧರಣಾ ಸತ್ಯಾಗ್ರಹ ನಡೆಸಿವೆ.

28-4-82 ರಂದು ಅಕ್ರಮ ಲಾಕೌಟ್‌ನ್ನು ಘೋಷಿಸಿದ ಆಡಳಿತ ವರ್ಗ 3-3-82 ರಂದು ಫ್ಯಾಕ್ಟರಿಯನ್ನು ಬಂದ್ ಮಾಡಿತು. ಧೀರ್ಘ ಮತ್ತು ವಿರೋಚಿತ ಹೋರಾಟ ನಡೆಸಿದ ನಂತರ ಇತ್ತೀಚೆಗೆ ಒಪ್ಪಂದಕ್ಕೆ ಬರಲಾಗಿತ್ತು. ಒಪ್ಪಂದದ ಪ್ರಕಾರ 15-9-82 ರಿಂದ ಸೀನಿಯಾರಿಟಿ ಮೇಲೆ 200 ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವದೆಂದಾಗಿತ್ತು. ಆದರೆ ಇದುವರೆಗೆ ಕೇವಲ 67 ಕಾರ್ಮಿಕ (ಚಮಚಾಗಳನ್ನು)ರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಕಾರ್ಖಾನೆಯ ಹೆಚ್ಚಿನಂಶ ಕೆಲಸವನ್ನು ಕಾಂಟ್ರ್ಯಾಕ್ಟದಾರರಿಗೆ ಹಂಚಲಾಗಿದೆ.

ಈ ಅನ್ಯಾಯವನ್ನು ಪ್ರತಿಭಟಿಸಿ ಧರಣಾ ಕಾರ್ಯಕ್ರಮವು ನವೆಂಬರ್ 26 ರಿಂದ ಪ್ರಾರಂಭವಾಗಿದ್ದು ಡಿಸೆಂಬರ್ 15ರ ವರೆಗೆ ನಡೆಯಲಿದೆ.

ದೆಹಲಿ :

ನ್ಯಾಯ ಬೆಲೆಗಾಗಿ ಜಂಟಿ ಸಮಾವೇಶ

ರೈತನು ಬೆಳೆದ ಹತ್ತಿ ಮತ್ತು ಕಬ್ಬಿಗೆ ಬೆಂಬಲಿತ ನ್ಯಾಯ ಬೆಲೆಯನ್ನು ನಿರ್ಧರಿಸುವುದಕ್ಕೆ, ಹಾಗೆಯೇ ದೇಶದ ನಾನಾ ಭಾಗಗಳಲ್ಲಿ ಬರಗಾಲ, ನೆರೆ ಹಾವಳಿ, ಬಿರುಗಾಳಿಗಳಿಂದ ಉಂಟಾದ ಹಾನಿಗೆ ಪರಿಹಾರ ಒದಗಿಸುವುದಕ್ಕೆ ಸರಕಾರಗಳು ಸಂಪೂರ್ಣ ವಿಫಲಗೊಂಡಿವೆ. ಕಳೆದ ವರ್ಷದ ನಿಜವಾದ ಮಾರ್ಕೆಟ್ಟಿನ ಬೆಲೆಯನ್ನು ಸಂಪೂರ್ಣ ಕಡೆಗಣಿಸಿ ಒಕ್ಕಲತನ ಬೆಲೆ ಕಮಿಶನ್ (ಅಗ್ರಿಕಲ್ಚರಲ್ ಪ್ರೈಸ್ ಕಮಿಶನ್) ಕಬ್ಬುಕೊಳ್ಳುವ ಬೆಲೆಯನ್ನು ಅತಿ ಕಡಿಮೆ ನಿರ್ಧರಿಸಿದೆ. ಹೋದ ವರ್ಷ ಮಾರ್ಕೆಟ್ ಬೆಲೆ ರೂ. 20 ರಿಂದ 23 ಇತ್ತು. ಉತ್ಪಾದನೆಯ ಖರ್ಚು ಹೆಚ್ಚಾಗಿರುವುದನ್ನು ಗಮನಕ್ಕೆ ತೆಗೆದುಕೊಂಡು ಈ ವರ್ಷ ಕ್ವಿಂಟಲ್ಲಿಗೆ ರೂ. 30 ನಿರ್ಧರಿಸಬೇಕು ಎಂಬ ಬೇಡಿಕೆಯನ್ನು ನವೆಂಬರ್ 4 ರಂದು ದೆಹಲಿಯಲ್ಲಿ ಸೇರಿದ್ದ ವಿವಿಧ ರೈತ ಸಂಘಗಳ ಸಭೆಯಲ್ಲಿ ನಿರ್ಧರಿಸಲಾಯಿತು. ಅಖಿಲ ಭಾರತ ಕಿಸಾನ್ ಸಭಾ, ಸಂಯುಕ್ತ ಕಿಸಾನ್ ಸಭಾ, ಅಗ್ರಗಾಮಿ ಕಿಸಾನ್ ಸಭಾ, ಕಿಸಾನ್ ಕಾಮಗಾರ ಸೆಲ್, ಜನವಾದಿ ಪಾರ್ಟಿಗಳ ನೇತೃತ್ವದಲ್ಲಿ ಈ ಸಮಾವೇಶ ನಡೆಯಿತು. ಪಂಜಾಬ್, ಹರಿಯಾಣ, ರಾಜಾಸ್ಥಾನ, ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಬಿಕ್ಕಟ್ಟಿನ ಭಾರವನ್ನು ಅಸಂಘಟಿತ ರೈತರ ಮೇಲೆ ಹೇರಲು ಸರಕಾರ ನಿರ್ಧರಿಸಿದ್ದಾಗ, ಸರ್ವ ಶಕ್ತಿಯಿಂದ ಇದನ್ನು ವಿರೋಧಿಸಲು ರಾಜ್ಯ ಮಟ್ಟದ ಸಮ್ಮೇಳನ ಕರೆದು ಐಕ್ಯ ಹೋರಾಟ ಮುಂದುವರಿಸಬೇಕೆಂದು ಹರಿಕೃಷ್ಣ ಸಿಂಗ್ ಸೂರ್ಜಿತ್ ತಮ್ಮ ಸಮಾರೋಪಭಾಷಣದಲ್ಲಿ ಕರೆ ನೀಡಿದರು.

○

ಶ್ರದ್ಧಾಂಜಲಿ

ಪ್ರಾಂತ ರೈತ ಸಂಘದ ಮುಷ್ಟೂರು ಗ್ರಾಮ (ರಾಯಚೂರು ಜಿಲ್ಲೆ) ಘಟಕವು ಸಭೆ ಸೇರಿ ಇತ್ತೀಚೆಗೆ ನಿಧನರಾದ ಕಾಂ| ಲಿಯೋನಿಡ್ ಬ್ರೆಜ್ನೇವ್‌ರಿಗೆ ಶ್ರದ್ಧಾಂಜಲಿ ಸಲ್ಲಿಸಿತು.

ಗ್ರಾಮ ಘಟಕದ ಸಂಚಾಲಕ ಹನುಮಂತಪ್ಪ ಮತ್ತು ಕಾರ್ಯದರ್ಶಿ ಬಿ. ರಾಮಪ್ಪ ಮುಂತಾದವರು ಮಾತನಾಡಿ ವಿಶ್ವ ಶಾಂತಿಗೆ ಕಾಂ| ಬ್ರೆಜ್ನೇವ್‌ರ ಕೊಡುಗೆಯನ್ನು ಸ್ಮರಿಸಿದರು.

ಪರಿಸರ

● ಶಿವಸೇನಾದಂತೆ, ಗೋವಾ ಸಮಾಜವನ್ನು ಸಹ ಆಳುವ ಪಕ್ಷದ ಎರಡು ಬಣಗಳು ತಮ್ಮ ಸ್ವಾರ್ಥಸಾಧನೆಗೆ ಬಳಸಿಕೊಳ್ಳುತ್ತಿದ್ದು, ಕನ್ನಡಿಗರ ಮೇಲೆ ನಡೆಸಿದ ಹಿಂಸಾಚಾರ ಸಹ ಶಿವಸೇನಾದ ಮಾದರಿಯಲ್ಲಿದೆ. ಕನ್ನಡಿಗರು ಗುಡಿಸಲು ಹಾಕಿ ವಾಸಿಸುವ ಜಾಗ ಸಾಲ್‌ಗಾಂವಕಾರ್ ಕೈಗಾರಿಕಾ ಗುಂಪಿಗೆ ಹೋಟೇಲು ಕಟ್ಟಲು ಬೇಕಾಗಿದ್ದು, ಇವರು ಗೋವಾ ಸಮಾಜದ ದ್ವೇಷವನ್ನು ಉಪಯೋಗಿಸಿಕೊಂಡಿದ್ದಾರೆಂದು ಗೋವೇತರರನ್ನು ಬಡ ಕಾರ್ಮಿಕರ ಹಿತರಕ್ಷಕ ಸಮಿತಿಯ ಸದಸ್ಯರು ಆಪಾದಿಸಿದ್ದಾರೆ.

ಇ. ಎಸ್. ಎಸ್. ನ. 11

● ತ್ರಿವೇಂಡ್ರಮ್ ಇಂಜನೀಯರಿಂಗ್ ಕಾಲೇಜಿನಲ್ಲಿ ರ್ಯಾಗಿಂಗ್ ಅತ್ಯಾಚಾರಗಳು, ಮೂವರು ವಿದ್ಯಾರ್ಥಿಗಳು ಅಪಹರಣದ ಬಗ್ಗೆ ಪೋಲೀಸರು ತನಿಖೆ ನಡೆಸುತ್ತಿದ್ದ ಹಾಗೆ, ಒಬ್ಬ ವಿದ್ಯಾರ್ಥಿನಿಯನ್ನು ಕಾಲೇಜು ಆವರಣದಲ್ಲೇ ಹಲವು ವಿದ್ಯಾರ್ಥಿಗಳ ಗುಂಪೊಂದು (ವಿದ್ಯಾರ್ಥಿನಿಯರು ಸೇರಿದಂತೆ) ವಿವಸ್ತ್ರಗೊಳಿಸಿದ ಘಟನೆ ವರದಿಯಾಗಿದೆ.

—ಯು.ಎಸ್.ಐ., ನ 13

● ದೇವರನ್ನು ನಿಂದಿಸಿದರೆ ನಿಮಗೆ ಸ್ವರ್ಗ ಸಿಗುತ್ತದೆ, ವೆಂಕಟರಾಮನನ್ನು ನಿಂದಿಸಿದರೆ ಮ್ಯಾಗ್ಸೇಸ್ ಪ್ರಶಸ್ತಿ ಸಿಗುತ್ತದೆ.

— ಕೇಂದ್ರ ಮಂತ್ರಿ ಆರ್. ವೆಂಕಟರಾಮನ್

● ತೃತೀಯ ಜಗತ್ತಿನ ರಾಷ್ಟ್ರಗಳಿಗೆ 1980ರಲ್ಲಿ ದೊರೆತ ಆರ್ಥಿಕ ನೆರವಿನ ಪ್ರಮಾಣ ಸುಮಾರು 20 ಬಿಲಿಯನ್ ಡಾಲರು. ಆದರೆ ಈ ದೇಶಗಳು ಶಸ್ತ್ರಾಸ್ತ್ರಕೊಳ್ಳಲು ಮಾಡಿದ ವೆಚ್ಚವೇ 18.3 ಬಿಲಿಯನ್ ಡಾಲರುಗಳು. ಜೊತೆಗೆ 41 ಬಿಲಿಯನ್ ಡಾಲರು ಮೊತ್ತದ ಶಸ್ತ್ರಾಸ್ತ್ರ ತರಿಸಿಕೊಳ್ಳಲು ಒಪ್ಪಂದಕ್ಕೆ ಸಹಿ ಹಾಕಿವೆ.

—ಲೇ|| ಜ|| ಇ. ಎ. ಎಸ್.(ನಿವೃತ್ತ) 'ಸಂಡೇ'ಯಲ್ಲಿ

● ಭಟ್ಟಂಗಿಗಳು ಭ್ರಷ್ಟಾಚಾರಿಗಳು, ಹಾಗೂ ತಲೆಹಿಡುಕರಿಗೆ ಕಾಂಗ್ರೆಸ್ ಪಕ್ಷ ಈಗ ಆಶ್ರಯಸ್ಥಾನವಾಗಿ ಹೋಗಿದೆ, ನಿಷ್ಠಾವಂತರಿಗೆ ಅಥವಾ ಪ್ರಾಮಾಣಿಕ ಕಾರ್ಯಕರ್ತರಿಗೆ ಅದರಲ್ಲಿ ಜಾಗವಿಲ್ಲ.

—ಹರಿಪ್ರಸಾದ್ ಚೌಧರಿ
(ಕಾಂಗ್ರೆಸ್ ರೈತರ ಸೆಲ್‌ನ ಮಾಜಿ ಕಾರ್ಯದರ್ಶಿ)

Printed & Published by P. Ramachandra Rao by him on behalf of the Communist Party of India Marxist Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street, Sultanpet, B 560 053 Phone-24154, Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO